## 1.ಕೃತಿ (Activity )

ಕೃತಿ ಎಂದರೆ ಮನಸ್ಸಿನ ಪ್ರಕ್ರಿಯೆಯಿಂದ ನಡೆಯುವ ಪ್ರತ್ಯಕ್ಷ ಕಾರ್ಯವಾಗಿದೆ. ವಿಚಾರಗಳ ಹೊಂದಾಣಿಕೆ, ನಿರೀಕ್ಷಣೆ, ಪರೀಕ್ಷೆ, ಸಹ-ಸಂಬಂಧವನ್ನು ತಿಳಿದುಕೊಂಡು ಮಾತು, ಬರವಣಿಗೆಗಳ ಮೂಲಕ ಅಭಿವ್ಯಕ್ತಿಗೊಳಿಸುವುದೇ ಕೃತಿ. ಕೃತಿಗಳಿಂದ ಭಾಷಾ ಕೌಶಲ್ಯಗಳ ವಿಕಾಸವಾಗುತ್ತದೆ. ವಿಶಿಷ್ಟ ಉದ್ದೇಶಕ್ಕಾಗಿ ಮಾಡಿದ ಕಾರ್ಯವೇ ಕೃತಿ.

ಕಂಠಪಾಠ ಮಾಡುವ ಆತಂಕದಿಂದ ವಿದ್ಯಾರ್ಥಿಗಳನ್ನು ದೂರಮಾಡಿ, ಆನಂದದ ವಾತಾವರಣದಲ್ಲಿ ಕೃತಿ ಸ್ವರೂಪದ ಅಂದರೆ ವಿದ್ಯಾರ್ಥಿಗಳು ಹೆಚ್ಚು ಸಹಭಾಗದಿಂದ ಕಲಿಸುವ ಹೊಸ ಪ್ರಯತ್ನ ಇಲ್ಲಿ ನಡೆದಿದೆ. ವಿವಿಧ ಭಾಷಾ ಚಟುವಟಿಕೆಗಳ ಮೂಲಕ ವಿದ್ಯಾರ್ಥಿಗಳು ಸ್ವತಃ ಭಾಷೆಯ ಕೌಶಲ್ಯಗಳನ್ನು ನಿತ್ಯ ಜೀವನದಲ್ಲಿ ಅಳವಡಿಸಿಕೊಳ್ಳಲು ಸಾಧ್ಯವಾಗುತ್ತದೆ. ಈ ಪದ್ಧತಿಯ ಮೂಲಕ ವಿದ್ಯಾರ್ಥಿಗಳ ನಿರ್ಣಯ ಕ್ಷಮತೆ, ಮೌಲ್ಯಾಧಾರಿತ ಭಾಷಾ ಕಲಿಕೆ, ವಿಚಾರ ಪ್ರವೃತ್ತರಾಗುವ ಗುಣ, ಆತ್ಮವಿಶ್ವಾಸ, ಸಮಸ್ಯೆ-ಸವಾಲುಗಳನ್ನು ಎದುರಿಸುವ ಉತ್ತಮ ಕೌಶಲ್ಯಗಳನ್ನು ಬೆಳೆಸಲು ಸಾಧ್ಯವಾಗುತ್ತದೆ.

ಕೃತಿಗಳ ಮೂಲಕ Higher Order Thinking Questions (Hot) ಉಚ್ಚ ಮಟ್ಟದಲ್ಲಿ ವಿಚಾರ ಮಾಡುವುದಕ್ಕೆ ಪ್ರೇರಣೆ ನೀಡುವಂತಹ ಪ್ರಶ್ನೆಗಳನ್ನು ಕೇಳಬಹುದು. ಮಾನಸಿಕ ಸಾಮರ್ಥ್ಯ, ಕಲ್ಪನೆಗೆ ಮುಕ್ತ ಅವಕಾಶ, ತಾರ್ಕಿಕ ಕ್ಷಮತೆ, ಸೃಜನಾತ್ಮಕತೆ, ಸ್ವತಂತ್ರ ಅಭಿವ್ಯಕ್ತಿಗೆ ಇಲ್ಲಿ ಒತ್ತು ನೀಡಲಾಗಿದೆ. ಈ ಮೂಲಕ ಜ್ಞಾನರಚನಾವಾದಕ್ಕೆ ಮೌಲ್ಯಮಾಪನದಲ್ಲಿ ಒಳ್ಳೆಯ ಸ್ಥಾನ ನೀಡಬಹುದು.

ಪರೀಕ್ಷೆ ಇದು ವ್ಯಕ್ತಿತ್ವವನ್ನು ಅರಳಿಸುವುದಕ್ಕೆ ಅಂತಿಮ ಸಾಧನವಲ್ಲ. ಕೃತಿಯುಕ್ತ ಪರೀಕ್ಷೆಗಳ ಮೂಲಕ ವ್ಯಕ್ತಿತ್ವ ವಿಕಾಸಕ್ಕೆ ಪ್ರೋತ್ಸಾಹ ನೀಡುವ ಯತ್ನ ಇಲ್ಲಿ ನಡೆದಿದೆ. ಪರೀಕ್ಷೆಯು ಅನೌಪಚಾರಿಕತೆ ಪಡೆದು, ವಿದ್ಯಾರ್ಥಿಗಳು ಉತ್ಸಾಹದಿಂದ ಕಲಿಯುವದರಲ್ಲಿ ಮಗ್ನರಾಗುವುದು ನಮ್ಮೆಲ್ಲರ ಉದ್ದೇಶವಾಗಿದೆ.

**2. ರೂಪರೇಷೆ (ಆರಾಖಡಾ)** Format of Activity Sheet is given earlier in SSC Board website.

**3. ಕೃತಿ ಪತ್ರಿಕೆಯ ನಮೂನೆ** Specimen of Activity Sheet is given earlier in SSC Board website.

## 4. ಮೌಲ್ಯಮಾಪನ ಪದ್ಧತಿ

ಕನ್ನಡ ಪ್ರಥಮ ಭಾಷೆ ಇಯತ್ತೆ: 10 ನೆಯ

( ಕುಮಾರ ಭಾರತಿ )

**ಯಾವ ಬದಲಾವಣೆಗಳಾಗಿವೆ ?**

- ಪ್ರಶ್ನೆಗಳ ಸರಮಾಲೆ ಇರಬಾರದು.
- ಭಾಷಾ ಕೌಶಲ್ಯಗಳನ್ನು ಪರೀಕ್ಷಿಸಲು ಹೆಚ್ಚು ಅನೌಪಚಾರಿಕ ಕೃತಿಗಳಿರಬೇಕು.
- ವೈವಿಧ್ಯಮಯವಾದ ಬರವಣಿಗೆಗಳಿರಬೇಕು.
- ಬರವಣಿಗೆಯ ಕೌಶಲ್ಯವನ್ನು ಪರೀಕ್ಷಿಸಲು ದಿನನಿತ್ಯ ಬದುಕಿಗೆ ಸಂಬಂಧಿಸಿದ ಕೃತಿಗಳನ್ನು ನೀಡಬೇಕು.
- ಸಾದರಪಡಿಸುವಿಕೆ (Presentation) ಯು ಹೆಚ್ಚು ಆಕರ್ಷಕವಾಗಿದೆ.
- ಕಲಿಕೆ ಮತ್ತು ಪರೀಕ್ಷಿಸುವಿಕೆಯ ಮಧ್ಯದ ಅಂತರವನ್ನು ಕಡಿಮೆಗೊಳಿಸಬೇಕು.
- ಓದುವ ಮತ್ತು ಬರೆಯುವ ಕೌಶಲ್ಯಗಳನ್ನು ಪರೀಕ್ಷಿಸುವ ಕಡೆಗೆ ಹೆಚ್ಚು ಲಕ್ಷ್ಯಕೊಡಬೇಕು.
- ಸ್ವಂತ ಅಭಿಪ್ರಾಯದ ಅಭಿವ್ಯಕ್ತಿಗೆ ಹೆಚ್ಚು ಮಹತ್ವ ಕೊಡಲಾಗಿದೆ.
- ಕಲಿಯುವವರಿಗೆ ವಿಚಾರ ಮಾಡುವ ಸ್ಫೂರ್ತಿಮತ್ತು ವ್ಯಕ್ತಪಡಿಸುವ ಹೆಚ್ಚು ಅವಕಾಶಗಳನ್ನು ಒದಗಿಸಲಾಗಿದೆ.
- ಉತ್ತರಗಳನ್ನು ಕಂಠಪಾಠ ಮಾಡುವ ಬದಲಾಗಿ, ರಂಜನೆಯುಕ್ತ ಕೃತಿಗಳನ್ನು ಆನಂದದಿಂದ ಬಿಡಿಸುತ್ತ ನಾಲ್ಕೂ ಭಾಷಾ ಕೌಶಲ್ಯಗಳನ್ನು ಮೈಗೂಡಿಸಿಕೊಳ್ಳುವರು.
- ಪ್ರಶ್ನೆಗಳ ಸಂಖ್ಯೆ ಕಡಿಮೆಯಾಗುವುದರಿಂದ ಮಕ್ಕಳ ಮಾನಸಿಕ ತಯಾರಿಯ ಉತ್ಸಾಹ ಇಮ್ಮಡಿಗೊಳಿಸುವುದು.
- ಪ್ರಶ್ನೆ ಪತ್ರಿಕೆಯ ಸ್ವರೂಪ ಹೆದರಿಸುವ ಬದಲಾಗಿ ಆಕರ್ಷಕ ಮತ್ತು ಗೌರವಾರ್ಹವಾಗಿದೆ.

**ಬದಲಾವಣೆಗಳು ಏಕೆ ಆಗಬೇಕು ?**

1. ಪ್ರಶ್ನೆಗಳು ಪರೀಕ್ಷೆಯ ಭಯವನ್ನು ಹುಟ್ಟಿಸುತ್ತವೆ.
2. ಮಿತವಾದ ವ್ಯಾಪ್ತಿ ಅಥವಾ ಉದ್ದೇಶ: ಏನು, ಏಕೆ, ಯಾವಾಗ, ಎಲ್ಲಿ, ಯಾರು ಮತ್ತು ಹೇಗೆ ಎಂಬಲ್ಲಿಗೆ ಸೀಮಿತವಾಗಿದೆ.
3. ವಿಷಯದ ಮತ್ತು ಸ್ಮರಣ ಶಕ್ತಿಯ ಪರೀಕ್ಷೆ.
4. ಮೌಲ್ಯಮಾಪನದಲ್ಲಿ ರಚನಾವಾದದ (constructivism) ಸ್ಥಾನ ಕಡಿಮೆ ಇರುವುದು.
5. ತರಗತಿಯ ಹೊರಗಿನ ಜೀವಂತ ಪ್ರಪಂಚದೊಂದಿಗೆ ಯಾವುದೇ ಸಂಬಂಧವಿಲ್ಲ.

6. ಉತ್ತೀರ್ಣ ಮತ್ತು ಅನುತ್ತೀರ್ಣ ಎಂಬ ಸಂದರ್ಭವು ಮುಜುಗುರವನ್ನು ಸೃಷ್ಟಿಸುತ್ತದೆ.

7. ವಿದ್ಯಾರ್ಥಿಗಳಿಗೆ ಗೊತ್ತಿಲ್ಲದ ವಿಷಯಗಳ ಪರೀಕ್ಷೆಗೆ ಪ್ರೋತ್ಸಾಹಿಸಬೇಕು.

8. ಆಸಕ್ತಿದಾಯಕ ಮತ್ತು ತೊಡಗಿಸಿಕೊಳ್ಳುವಂತಹ ಪರೀಕ್ಷೆಗಳು ಇರಬೇಕು.

9. ಮುಂಚಿತವಾಗಿ ಪ್ರಶ್ನೆಗಳ ಸೀಮಿತತೆಯನ್ನು ನಿರ್ಧರಿಸದಿರುವದಕ್ಕೆ ಸಾಕಷ್ಟು ಅವಕಾಶವಿರಬೇಕು.
   (Scope for open-endedness)

10. ಬದುಕಿಗೆ ಸಂಬಂಧಿಸಿದಂತೆ ಪರೀಕ್ಷಿಸಬೇಕು.

11. ಉಚ್ಚಮಟ್ಟದಲ್ಲಿ ವಿಚಾರ ಮಾಡುವ (Higher Order Thinking skils) ಕೌಶಲ್ಯಗಳನ್ನು ಪರೀಕ್ಷಿಸಬೇಕು.

12. ಅನೌಪಚಾರಿಕ ಮತ್ತು ಸಹಜವಾದ ಪರೀಕ್ಷೆ ನಡೆಸಬೇಕು.

13. ಭಯ ನಿರ್ಮಿಸುವಂತಹ ವಾತಾವರಣ ಶೂನ್ಯಕ್ಕೆ ತಲುಪಬೇಕು.

14. ಪರೀಕ್ಷೆ ನಡೆಸುವ ಸಲುವಾಗಿ ಪರೀಕ್ಷೆ ನಡೆಸಬಾರದು.

15. ಕೌಶಲ್ಯಗಳ ಸಮನ್ವಯತೆ ಇರಬೇಕು.

16. ವಿದ್ಯಾರ್ಥಿ ಕೇಂದ್ರಿತವಾಗಿರಬೇಕು.

17. ಮೌಲ್ಯಮಾಪನದಲ್ಲಿ ರಚನಾತ್ಮಕತೆ ಬೇಕು.

18. ಪರಸ್ಪರ – ಪ್ರತಿಕ್ರಿಯಿಸುವಂತಹ ಕೃತಿಗಳು ಇರಬೇಕು.

19. ಸಾಂದರ್ಭಿಕ ಕಲಿಕೆ ಮತ್ತು ಪರೀಕ್ಷೆಗೆ ಸಹಾಯ ಮಾಡುವಂತಹ ಕೃತಿಗಳು ಇರಬೇಕು.

20. ಅನೌಪಚಾರಿಕವಾಗಿ ಪರೀಕ್ಷಿಸಬೇಕು.

21. ಕಲಿಕೆ ಮತ್ತು ಪರೀಕ್ಷೆ ಒತ್ತಡರಹಿತವಾಗಿರಬೇಕು.

**ಕೃತಿಪತ್ರಿಕೆಯ ಮೂಲಕ ಆಗಲಿರುವ ಮೌಲ್ಯಮಾಪನಕ್ಕಾಗಿ ಅವಶ್ಯವಿರುವ ಅಧ್ಯಯನ –ಬೋಧನೆಯ ಸಂದರ್ಭದ ಸೂಚನೆಗಳು:**

1. ಕೃತಿಪತ್ರಿಕೆಯ ಮೂಲಕ ವಿದ್ಯಾರ್ಥಿಗಳ ಮೌಲ್ಯಮಾಪನ ಮಾಡುವುದಿದ್ದರೂ ಸಹ ಪ್ರಚಲಿತ ಪಠ್ಯಪುಸ್ತಕದಲ್ಲಿ ಯಾವುದೇ ಬದಲಾವಣೆ ಮಾಡಲಾಗಿಲ್ಲ.
2. ಪಠ್ಯಪುಸ್ತಕದಲ್ಲಿಯ ಪ್ರಶ್ನೆಗಳು(ಸ್ವಾಧ್ಯಾಯ) ಅಧ್ಯಯನಕ್ಕೆ ಅವಶ್ಯಕವಾಗಿವೆ. ಆದರೆ, ಅವುಗಳನ್ನು ಕೃತಿಗಳ ರೂಪದಲ್ಲಿ ಮಂಡಿಸಿ ಪರೀಕ್ಷೆ ತೆಗೆದುಕೊಳ್ಳುವುದು ಸಾಧ್ಯವಿದೆ.
3. ಪಾಠದ ಬೋಧನೆ ಮಾಡುತ್ತಿರುವಾಗ ಅದು ಕೃತಿಗಳ ಮೂಲಕವೇ ನಡೆಯುವಂತೆ ಶಿಕ್ಷಕರು ಲಕ್ಷ್ಯವಹಿಸುವುದು ಅವಶ್ಯವಾಗಿದೆ.
4. ಜ್ಞಾನರಚನಾವಾದದ ವಿವಿಧ ತತ್ವಗಳನ್ನು ಎದುರಿಗಿಟ್ಟುಕೊಂಡು ಅದು ಅಧ್ಯಯನ–ಬೋಧನೆಗಳಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಬರುವಂತೆ ನೋಡಿಕೊಳ್ಳುವುದು ಅವಶ್ಯವಾಗಿದೆ.
5. ಕೃತಿ ಪುಸ್ತಕವನ್ನು ಆದಷ್ಟು ಬೇಗ ಉಪಲಬ್ಧ ಮಾಡಿಕೊಡಲಾಗುವುದು. ಅದರ ಉಪಯೋಗವನ್ನು ಪಾಠಕ್ಕನುಗುಣವಾಗಿ ವಿವಿಧ ಕೃತಿಗಳಿಂದ ರೂಢಿ ಮಾಡಲು ಉಪಯೋಗಿಸಿಕೊಳ್ಳಬೇಕು.

6. ವಿದ್ಯಾರ್ಥಿಗಳಿಂದ ಯಾವ ಪ್ರತಿಕ್ರಿಯೆಯ ಅಪೇಕ್ಷೆ ಇದೆಯೋ, ಅದರ ಚರ್ಚೆಯನ್ನು ಅವಶ್ಯವಾಗಿ ವಿದ್ಯಾರ್ಥಿಗಳೊಂದಿಗೆ ಮಾಡಬೇಕು.

**ಕೃತಿಪತ್ರಿಕೆಯ ಪ್ರಶ್ನೆಪತ್ರಿಕೆಯನ್ನು ತಯಾರಿಸುವ ಶಿಕ್ಷಕರಿಗಾಗಿ ಸೂಚನೆಗಳು:**

ಕೃತಿಪತ್ರಿಕೆಯನ್ನು ತಯಾರಿಸುವುದು ಉತ್ತರ ಪತ್ರಿಕೆಯನ್ನು ತಯಾರಿಸುವುದಕ್ಕಿಂತ ಹೆಚ್ಚು ಆಹ್ವಾನಾತ್ಮಕವಾಗಿದೆ. ಪಾರಂಪರಿಕ ಪ್ರಶ್ನೆಪತ್ರಿಕೆ ಪದ್ಧತಿಯ ಬದಲಾಗಿ ಕೃತಿಗಳಿಂದ ಆಗುವ ಮೌಲ್ಯಮಾಪನದ ಬದಲಾವಣೆಯನ್ನು ಲಕ್ಷ್ಯದಲ್ಲಿಡುವುದು ಅವಶ್ಯವಾಗಿದೆ. ಮೌಲ್ಯಮಾಪನದಲ್ಲಿ ಪರೀಕ್ಷೆಯು ಬೇಸರ ತರಿಸುವ, ನೀರಸ ಹುಟ್ಟಿಸುವಂತೆ ಇರಕೂಡದು. ಅದು, ಆನಂದ ನೀಡುವ, ಚಿಂತೆಯಿಲ್ಲದ್ದು ಆಗಿರಬೇಕು ಎಂಬುದನ್ನು ನೆನಪಿಡಬೇಕು. ಅದರಂತೆಯೇ ಮೌಲ್ಯಮಾಪನವು ಪ್ರತ್ಯಕ್ಷವಾಗಿ ಜೀವನಕ್ಕೆ ಹೊಂದಿಕೊಳ್ಳುವಂತಿರಬೇಕು. ಅದರಲ್ಲಿ ಜ್ಞಾನ ರಚನಾವಾದದಲ್ಲಿಯ ತತ್ವಗಳನ್ನು ಉಪಯೋಗಿಸಿ ಕೃತಿಪತ್ರಿಕೆಯನ್ನು ತಯಾರಿಸಬೇಕು. ಪ್ರಶ್ನಾರ್ಥಕ ವಾಕ್ಯಗಳ ಸಹಾಯದಿಂದ ಮೌಲ್ಯಮಾಪನದೊಂದಿಗೆ ಕೃತಿಗಳಿಂದ ವಿದ್ಯಾರ್ಥಿಗಳು ಜ್ಞಾನ ಸಂಪಾದನೆ ಮಾಡಿದ ಬಗ್ಗೆ ಪರೀಕ್ಷೆ ಮಾಡುವ ಅಪೇಕ್ಷೆಯೂ ಇದೆ. ವಿದ್ಯಾರ್ಥಿಗಳು ಅವರ ಸ್ಮರಣಶಕ್ತಿಯ ಪರೀಕ್ಷೆಗೆ ಮಹತ್ವ ಕೊಡುವುದಕ್ಕಿಂತ ಸಮಸ್ಯೆಯನ್ನು ಮಾಡುವ ಕೃತಿಗಳನ್ನು ಮಾಡುವುದು ಅಪೇಕ್ಷಿತವಾಗಿದೆ.

## ಪ್ರಶ್ನೆ ಪತ್ರಿಕೆ ರಚಿಸುವ ಶಿಕ್ಷಕರು ಕೃತಿಪತ್ರಿಕೆಯನ್ನು ತಯಾರಿಸುವಾಗ ಮುಂದಿನ ಸೂಚನೆಗಳತ್ತ ಗಮನ ನೀಡಬೇಕು.

### (ಅ) ಕೃತಿಪತ್ರಿಕೆಯನ್ನು ತಯಾರಿಸುವ ಮೊದಲು:

1. ಭಾಷೆಯ ಅಧ್ಯಯನದ ಉದ್ದೇಶಗಳನ್ನು ಸ್ಪಷ್ಟವಾಗಿ ಗಮನದಲ್ಲಿಟ್ಟುಕೊಂಡು ಸಾಕಷ್ಟು ಅಭ್ಯಾಸ ಮಾಡುವುದು ಅವಶ್ಯವಾಗಿದೆ.
2. ಕೌಶಲ್ಯಾಧಾರಿತ ಕೃತಿಗಳನ್ನು ಆಯ್ಕೆ ಮಾಡಲು ಭಿನ್ನ ಭಿನ್ನ ಪ್ರಕಾರಗಳ ಕೃತಿಗಳನ್ನು ಮಾಡುವುದು ಅವಶ್ಯವಾಗಿದೆ. ಇದರಿಂದಾಗಿ ಒಂದೇ ಪ್ರಕಾರದ ಕೃತಿಗಳ ಪುನರಾವೃತ್ತಿ ಕೃತಿಪತ್ರಿಕೆಯಲ್ಲಿ ಆಗಲಾರದು.
3. ಪ್ರತಿಯೊಂದು ಕೃತಿಯಿಂದ ಯಾವ ಕೌಶಲ್ಯದ ಪರೀಕ್ಷೆ ಆಗಲಿದೆ ಎಂಬುದನ್ನು ನಿಶ್ಚಿತಪಡಿಸುವುದು ಅವಶ್ಯವಾಗಿದೆ.
4. ಗ್ರಹಿಸುವ (comprehension)(ಆಕಲನ) ಕೌಶಲ್ಯದ ಕಲೆಯನ್ನು ಅಳೆಯುವ ಘಟಕಗಳನ್ನು ಆಯ್ದುಕೊಳ್ಳುವಾಗ ಜಾಗ್ರತೆ ವಹಿಸಿರಿ. ಈ ಘಟಕಗಳು ರೂಪರೇಷೆ(ಆರಾಖಡಾ)ಯಲ್ಲಿ ನಮೂದಿಸಿದ ಶಬ್ದ ಮಿತಿಯನ್ನು ಮೀರಕೂಡದು. ಅರ್ಥಪೂರ್ಣವಾದ ಘಟಕದ ಆಯ್ಕೆ ಮಾಡಬೇಕು. ಪಠ್ಯಪುಸ್ತಕದಲ್ಲಿಯ ಘಟಕಗಳಲ್ಲಿ ಅನಾವಶ್ಯಕವಾದ ಬದಲಾವಣೆ ಮಾಡಬಾರದು. ಘಟಕಗಳು ಹೆಚ್ಚು ದೊಡ್ಡವೂ ಇಲ್ಲವೇ ಅತೀ ಚಿಕ್ಕವೂ ಆಗಿರಬಾರದು. ಘಟಕದಲ್ಲಿಯ ಸಂದರ್ಭ ಪೂರ್ಣವಾಗಿರಬೇಕು. ಒಂದೇ ಪಾಠದಲ್ಲಿಯ ಎರಡು ಘಟಕಗಳು ಇರಕೂಡದು. ವಿವಿಧ ಪ್ರಕಾರದ ಕೃತಿಗಳನ್ನು ಮಾಡಬಹುದಾದ ಘಟಕಗಳನ್ನೇ ತೆಗೆದುಕೊಳ್ಳಬೇಕು.
5. ಕೃತಿಗಾಗಿ ಅವಶ್ಯವಾದ ವಿವಿಧ ಆಕಾರಗಳು ಸಕಾರಣ ಮತ್ತು ಸದುದ್ದೇಶಗಳನ್ನು ಹೊಂದಿರಬೇಕು. ಅವಶ್ಯಕತೆ ಇರದ ವಿವಿಧ ಭೂಮಿತಿಯ ಆಕಾರಗಳನ್ನು ಉಪಯೋಗಿಸಬೇಡಿರಿ.
6. ಕೃತಿ ಮಾಡಲು ಅವಶ್ಯವಾದ ಸೂಚನೆಗಳು ಸ್ಪಷ್ಟವಾಗಿರಬೇಕು. ಅವುಗಳಿಂದ ಯಾವುದೇ ಪ್ರಕಾರದ ಗೊಂದಲ ನಿರ್ಮಾಣವಾಗಬಾರದು. ಉತ್ತರಿಸುವ ಅಪೇಕ್ಷೆಗಳನ್ನು ಸರಿಯಾಗಿ ವ್ಯಕ್ತಪಡಿಸಿರಿ.
7. ಸಂಪೂರ್ಣ ಕೃತಿ ಪತ್ರಿಕೆಯಲ್ಲಿ ಒಂದು ಪ್ರಕಾರದ ಕೃತಿ ಒಂದೇ ಸಲ ಬರಬೇಕು, ಪುನರಾವೃತ್ತಿ ಆಗದಿರಲಿ.

8. ಉಪಪ್ರಶ್ನೆಗಳ ಗುಣಗಳು ಹಾಗೂ ಅಪೇಕ್ಷಿತ ಉತ್ತರಗಳ ಸಂಖ್ಯೆಯಲ್ಲಿ ಹೊಂದಾಣಿಕೆ ಇರಲಿ. ಒಂದು ಉಪಪ್ರಶ್ನೆಗೆ ಅರ್ಧ(1/2)ಕ್ಕಿಂತ ಕಡಿಮೆ ಗುಣ ಕೊಡುವುದು ಸಾಧ್ಯವಿಲ್ಲ ಎಂಬುದರ ಅರಿವು ಇರಲಿ.
9. ಕೃತಿಗಳ ಮಂಡನೆ ಆಕರ್ಷಕವಾಗಿರಲಿ, ಆದರೆ ಅದು ತರ್ಕಬದ್ಧವಾಗಿಯೂ ಇರಲಿ.
10. ಬರವಣಿಗೆ ಕೌಶಲ್ಯಗಳ ಮೇಲೆ ಕೃತಿಗಳನ್ನು ತಯಾರಿಸುವಾಗ ವಿದ್ಯಾರ್ಥಿಗಳಿಗೆ ಬರೆಯಲು ಅಂಶಗಳು ಸಿಗುವಂತೆ ಇರಬೇಕು.
11. ಬರವಣಿಗೆ ಕೌಶಲ್ಯಗಳಲ್ಲಿ ಆರಿಸಿಕೊಂಡ ವಿಷಯದಲ್ಲಿ ಯಾವುದೇ ಸಮಾಜ, ಧರ್ಮ, ಜಾತಿ, ಭಾಷೆ, ಲಿಂಗ ಮುಂತಾದ ಭೇದಗಳ ಮೇಲೆ ಪೂರ್ವಗ್ರಹಪೀಡಿತವಾಗಿರಬಾರದು. ಸಮಾಜದಲ್ಲಿ ವೈರತ್ವ ಉಂಟುಮಾಡುವ ಆಕ್ಷೇಪಾರ್ಹವಾದ ವಿಷಯಗಳು ಇರಬಾರದು.
12. ಕೃತಿಗಳನ್ನು ತಯಾರಿಸುವಾಗ ಅವುಗಳ ಸಂಪೂರ್ಣ ಸಂದರ್ಭವನ್ನು ಹೊಂದಿರುವ ಪರಿಚ್ಛೇದದ ಮೇಲೆ ಆಧರಿಸಿರಬೇಕು. ಪಾಠದಲ್ಲಿಯ ಇತರ ಭಾಗವನ್ನು ಆಧರಿಸಿದ ಸಂದರ್ಭಗಳು ಕೃತಿಗಳಲ್ಲಿ ಇರಬಾರದು.

**(ಬ) <u>ಕೃತಿಪತ್ರಿಕೆ ತಯಾರಿಸುವುದರೊಂದಿಗೆ:</u>**

1. ಕೃತಿ ಪತ್ರಿಕೆಯನ್ನು ತಯಾರಿಸುತ್ತಿರುವಾಗಲೇ ಅಪೇಕ್ಷಿತ ಉತ್ತರ ಪತ್ರಿಕೆಗಳನ್ನು ತಯಾರಿಸಬೇಕು.

2. ಯಾವ ಅಂಶಕ್ಕೆ ಎಷ್ಟು ಗುಣಗಳು ಅಪೇಕ್ಷಿತವಾಗಿವೆ ಎಂಬುದನ್ನು ಸ್ಪಷ್ಟಪಡಿಸಬೇಕು.

## ಕೃತಿಗಳ ಸ್ವರೂಪ

❖ ಜೇಡರ ಬಲೆಯಾಕಾರದ ಆಕೃತಿ (Web), ತೂಗುಪಟ (Flow chart), ಪರಿಕಲ್ಪನೆಯ ನಕಾಶೆ (Concept Map), ವೃಕ್ಷ ರೇಖಾಕೃತಿ (Tree diagram)

❖ ಮಾಹಿತಿ ಬದಲಾಯಿಸುವುದು, ಪರಿಚ್ಛೇದವನ್ನು ಆಕೃತಿಗೆ ಮತ್ತು ಆಕೃತಿಯನ್ನು ಪರಿಚ್ಛೇದಕ್ಕೆ ಪರಿವರ್ತಿಸುವುದು.

❖ ಒಂದು ಶಬ್ದಕ್ಕೆ ಸಮಾನ ಅರ್ಥ ನೀಡುವ ಬೇರೆ ಪದ ಬರೆಯುವುದು.

❖ ಕನಿಷ್ಟ ನಾಲ್ಕು ಅಕ್ಷರಗಳಿರುವ ಪ್ರತಿಯೊಂದು ಅಕ್ಷರದಿಂದ ಆರಂಭವಾಗುವ ಹೊಸ ಶಬ್ದ ಬರೆಯುವುದು. ಒಂದೇ ಶಬ್ದಕ್ಕೆ ಬೇರೆ ಬೇರೆ ಅರ್ಥಕೊಡುವ ಪದಗಳನ್ನು ಕೊಡಲು ತಿಳಿಸುವುದು.

❖ ಅನೇಕ ಪರ್ಯಾಯಗಳಿಂದ ಯೋಗ್ಯ ಪರ್ಯಾಯ ಬರೆಯುವುದು.

❖ ಬಿಟ್ಟ ಸ್ಥಳ ತುಂಬುವುದು, ವಾಕ್ಯ ಪೂರ್ಣಗೊಳಿಸುವುದು.

❖ ಕೋಷ್ಟಕ/ ಪರಿಚ್ಛೇದ ತಯಾರಿಕೆ

❖ ವಾಕ್ಯಗಳನ್ನು ಕ್ರಮವಾಗಿ ಬರೆಯುವುದು.

❖ ಭಿತ್ತಿಪತ್ರ ತಯಾರಿಕೆ

❖ ವರದಿ ಲೇಖನ

☆ ಸರಿ /ತಪ್ಪು

☆ ಸ್ವ ಅಭಿಪ್ರಾಯ

☆ ಪದಬಂಧ, ಒಗಟು,

☆ ಗುಂಪಿಗೆ ಸೇರದ ಪದವನ್ನು ಬರೆಯುವುದು

- ❖ ಸಂಭಾಷಣೆ ಲೇಖನ
- ☆ ಸಾರಾಂಶ ಲೇಖನ
- ❖ ಕಥೆ ಬೆಳವಣಿಗೆ
- ❖ ಮೊದಲೆರಡು ಪದಗಳಿಗೆ ಸಂಬಂಧಿಸಿದಂತೆ ಮೂರನೆಯ ಪದ ಬರೆದು, ಅದಕ್ಕೆ ಸಂಬಂಧಿಸಿದ ಪದ ಬರೆಯುವುದು.

## ಆಲಿಸುವಿಕೆಯ ಕೌಶಲ್ಯಗಳು Listening Skills

1. ಶಿಕ್ಷಕರು ವಿವಿಧ ರೀತಿಯ ಕವಿತೆಗಳನ್ನು ವರ್ಗದಲ್ಲಿ ಹಾಡಿ, ರಾಗಬದ್ಧವಾಗಿ ಹೇಳಿ ಪ್ರಾಸಬದ್ಧ ಕವಿತೆಗಳ ಸೌಂದರ್ಯವನ್ನು ಸವಿಯಬೇಕು ಮತ್ತು ಮೆಚ್ಚಿಕೊಳ್ಳಬೇಕು.
2. ಭಿನ್ನ ಸಂದರ್ಭಗಳಲ್ಲಿಯ ಹೊಸ ಶಬ್ದಗಳನ್ನು ಮತ್ತು ಪಡೆನುಡಿಗಳ ಅರ್ಥಗಳನ್ನು ಊಹಿಸಬೇಕು.
3. Global understanding–ಒಟ್ಟಿನ, ಸಮಷ್ಟಿಯ, ಇಡೀ ಸಮಗ್ರವಾದ ತಿಳುವಳಿಕೆ ನೀಡುವ ಯೋಗ್ಯವಾಗಿ ಉದ್ದವಾಗಿರುವ ವಿವಿಧ ಗದ್ಯಖಂಡಗಳನ್ನು ಓದಬೇಕು ಮತ್ತು ರೆಕಾರ್ಡ್ ಮಾಡಿ ಆಲಿಸಬೇಕು.
4. Narration- ಕಥನ, ಕಥೆ ನಿರೂಪಿಸುವುದು; ಕಥೆ ವರ್ಣನಾತ್ಮಕ ಮುಂತಾದ ಗದ್ಯಪಾಠಗಳನ್ನು ಮೆಚ್ಚಿಕೊಂಡು ಗಟ್ಟಿಯಾಗಿ ಓದಬೇಕು. ಮಕ್ಕಳು ತಂತಾನೆ ಅದರ ಮೇಲೆ ತಯಾರಿಸಿದ ಪ್ರಶ್ನೆಗಳಿಗೆ ಉತ್ತರಿಸುತ್ತಾರೆ.
5. ಮುಖ್ಯಾಂಶ ಮತ್ತು ಸಾರಾಂಶವನ್ನು ಬರೆಯುವ ಉದ್ದೇಶದಿಂದ ಭಾಷಣ ಮತ್ತು ಗದ್ಯಖಂಡಗಳನ್ನು ಆಲಿಸುವುದು.
6. ಯೋಗ್ಯ ಉದ್ದವಿರುವ ಧ್ವನಿ ಸುರುಳಿ (ರೆಕಾರ್ಡೆಡ್) ಯ ಕಥೆಗಳು, ಕಥಾನಿರೂಪಣೆ, ವರ್ಣನೆ, ಮಾಹಿತಿಯ ತುಣುಕು ಅಥವಾ ಓದಿದ ಭಾಗವನ್ನು ತಿಳಿದುಕೊಂಡು, ಸಂಬಂಧಿತ ಪ್ರಶ್ನೆಗಳನ್ನು ಕೇಳಬೇಕು.
7. ಓದಿದ ಗದ್ಯಖಂಡಕ್ಕೆ ಸಂಬಂಧಿಸಿದ / ಸಂಬಂಧವಲ್ಲದ ಅಂಶಗಳು; ವಾಸ್ತವಗಳು ಮತ್ತು ಅಭಿಪ್ರಾಯಗಳನ್ನು ಗುರುತಿಸುವುದು.
8. ಭಾಷಣಕಾರನ ದೃಷ್ಟಿಕೋನ/ಉದ್ದೇಶ/ ಮನೋಭಾವದಿಂದ ಆರಿಸಿಕೊಂಡ ಶಬ್ದಗಳು ಮತ್ತು ನೀಡಿದ ಸಂದೇಶವನ್ನು ಗ್ರಹಿಸುವ ತೀರ್ಮಾನಕ್ಕೆ ಬರುವುದು.
9. ನೀಡಿದ ಸುಳಿವು (Clues) ಗಳ ಆಧಾರದಿಂದ ಭಾಷಣ, ಕಥೆ, ಸಂಭಾಷಣೆ ಮುಂತಾದ ಸಂದರ್ಭಗಳಲ್ಲಿ ಮುಂದೇನಾಗುವುದು ಎಂದು ಹೇಳಬೇಕು.
10. ಸಾಹಿತ್ಯದ ವಿವಿಧ ಪ್ರಕಾರಗಳಿಂದ ಹೊಮ್ಮುವ ಭಾಷೆ ಮತ್ತು ಅನುಭವಗಳನ್ನು ಆನಂದಿಸುವ ಮತ್ತು ಕೊಂಡಾಡುವ ಅರಿವನ್ನು ಮೂಡಿಸುವುದು.
11. Genre (n) –ಕಾವ್ಯದ, ಕಲೆಯ – ಪ್ರಕಾರ, ಬಗೆ, ಶೈಲಿ; ಪಾಠ ಅಥವಾ ಪದ್ಯವನ್ನು ಕೇಳಿದ ನಂತರ ಅದರ ಸಾಹಿತ್ಯದ ಪ್ರಕಾರವನ್ನು ಗುರುತಿಸಿ ಬರೆದುಕೊಳ್ಳಬೇಕು.
12. ಬೋಧನೆ, ಸಂಭಾಷಣೆ ಮತ್ತು ಸಂದರ್ಶನ (Interview) ಗಳನ್ನು ಗ್ರಹಿಸುವ ದೃಷ್ಟಿಯಿಂದ ಕೇಳಬೇಕು.

13. ವಾರ್ತೆ, ಕಾಮೆಂಟ್ರಿ, ಭಾಷಣಗಳು ಮತ್ತು ರೇಡಿಯೋ/ ಟಿ.ವಿ/ ಟೇಪರೇಕಾರ್ಡರ/ಸಿ.ಡಿ.ಗಳು (T.V/Tapes/ CDs) ಮತ್ತು ಸಮೂಹಮಾಧ್ಯಮಗಳ ಕಾರ್ಯಕ್ರಮಗಳನ್ನು ಗ್ರಹಣ ಮಾಡಿಕೊಳ್ಳುವಂತೆ ಕೇಳಿಸಿಕೊಳ್ಳಬೇಕು.

14. ಧ್ವನಿಯ ಏರಿಳಿತ; ಸೂಕ್ಷ್ಮ ವಿಚಾರಗಳನ್ನು ಅರ್ಥಮಾಡಿಕೊಳ್ಳಬೇಕು.

15. ವಾದ ಮಂಡಿಸುವ, ಚರ್ಚಿಸುವ, ಬರೆಯುವ, ಓದುವ, ಪಾತ್ರಾಭಿನಯ (Role play), ಸಮಸ್ಯೆ ಬಗೆಹರಿಸುವ ಮತ್ತು ನಿರ್ಧರಿಸುವ ಕೃತಿಗಳಿಗಾಗಿ ಆಲಿಸುವಿಕೆಯನ್ನು ಬಳಸಿಕೊಳ್ಳಬೇಕು.

16. ಶಬ್ದಗಳೆರಡರ ಮಧ್ಯೆ ಅಡಗಿರುವ ಅರ್ಥವನ್ನು ಗ್ರಹಿಸುವುದು.

## ಮಾತನಾಡುವ ಕಲೆಗಳು Speaking Skills

1. ಕವಿತೆಗಳ ಲಯ, ಸ್ವರ ಹಾಗೂ ಶಬ್ದೋಚ್ಚಾರಗಳಲ್ಲಿ ಸ್ವರಾಘಾತ (ಸರಿಯಾದ ಸ್ವರಕ್ಕೆ ಒತ್ತು ಕೊಟ್ಟು ಹೇಳುವುದು) ಕಲಿಯಬೇಕು.
2. ಮಾತನಾಡುವಾಗ ಒಮ್ಮತದಿಂದ ಸ್ವೀಕರಿಸಲ್ಪಡುವ ಉಚ್ಚಾರ ಹಾಗೂ ಸರಿಯಾದ ಒತ್ತು ನೀಡಿ ಸ್ವರಾಘಾತಗಳನ್ನು ಕಲಿಯಬೇಕು.
3. ವಿವಿಧ ಶಬ್ದ ಹಾಗೂ ಪದಸಮುಚ್ಚಯಗಳ ಉಪಯೋಗವನ್ನು ಬೇರೆ ಬೇರೆ ಸಂದರ್ಭಗಳಲ್ಲಿ ಮಾಡಲು ಕಲಿಯಬೇಕು.
4. ವರ್ಗದಲ್ಲಿ ಓದಿದ ಸುಮಾರಾಗಿ ದೊಡ್ಡದಿರುವ ಗದ್ಯಭಾಗದ ಸಾರಾಂಶ ಹೇಳಲು ಬರಬೇಕು.
5. ವಿದ್ಯಾರ್ಥಿಯು ವರ್ಗದಲ್ಲಿ ಸ್ವತಃ ಇತರರು ಓದಿದ ವಿಶಿಷ್ಟ ಮಾಹಿತಿ ನೀಡುವ ಗದ್ಯಭಾಗದ ಮೇಲೆ ಆಧಾರಿತ ಪ್ರಶ್ನೆಗಳಿಗೆ ಮೌಖಿಕ ಉತ್ತರ ಕೊಡಬೇಕು.
6. ಕಲ್ಪನೆ ಹಾಗೂ ಭಾವನೆಗಳನ್ನು ಸರಿಯಾಗಿ, ಸ್ಪಷ್ಟವಾಗಿ ಹಾಗೂ ಸುಸಂಬಂಧವಾಗಿ ವ್ಯಕ್ತಪಡಿಸಬೇಕು.
7. ಕಥೆ, ನಿರೂಪಣೆ, ವಿವರಣೆ, ಉಚಿತವಾದ, ಸಮಾಚಾರದ ಭಾಗಗಳ ಮೇಲೆ ಪ್ರಸಂಗಕ್ಕೆ ತಕ್ಕಂತಹ ಪ್ರಶ್ನೆಗಳನ್ನು ಕೇಳಲು ತಿಳಿದುಕೊಳ್ಳಬೇಕು.
8. ಸಂಬಂಧಪಟ್ಟ ಹಾಗೂ ಸಂಬಂಧಪಡದ ವಿಷಯಗಳ ಭೇದ ತಿಳಿಯಬೇಕು.
9. ರೇಡಿಯೋ, ಟಿ.ವ್ಹಿ, ಧ್ವನಿಸುರುಳಿ, ಸಿ.ಡಿ. ಮುಂತಾದವುಗಳಲ್ಲಿ ಇರುವ (ಸಮಾಚಾರ, ಭಾಷಣ, ವೀಕ್ಷಕ ವಿವರಣೆ) ಮುಂತಾದವುಗಳ ಚಿಕ್ಕ, ಮೌಖಿಕ ವಿವರಣೆ ನೀಡುವುದನ್ನು ತಿಳಿದುಕೊಳ್ಳಬೇಕು.
10. ಭಾಷಣಕಾರರ ಅಥವಾ ಲೇಖಕರ ಭಾವನೆ, ಮನೋವೃತ್ತಿ ಹಾಗೂ ಉದ್ದೇಶಗಳ ಮೇಲೆ ವಿದ್ಯಾರ್ಥಿಗಳು ತಮ್ಮ ಅಭಿಪ್ರಾಯವನ್ನು ಮೌಖಿಕವಾಗಿ ಸಾದರಪಡಿಸಬೇಕು.
11. ಚರ್ಚೆ, ವಾದ-ವಿವಾದ, ಸಂದರ್ಶನ, ಸಂಭಾಷಣೆ ಮುಂತಾದವುಗಳಲ್ಲಿ ಭಾಗವಹಿಸಬೇಕು.
12. ಕಥೆ, ಚುಟುಕು, ಪ್ರಸಂಗ, ಸ್ವಾನುಭವ ಘಟನೆಗಳ ವಿವರಣೆ ಮುಂತಾದವುಗಳನ್ನು ಕೇಳಬೇಕು.
13. ಲೇಖಕರ ಕಲ್ಪನೆ ಹಾಗೂ ದೃಷ್ಟಿಕೋನಗಳ ಮೇಲೆ ಟೀಕೆ ಮಾಡಲು ಕಲಿಯಬೇಕು.

14. ಆಶುಭಾಷಣ (ಮೊದಲೇ ತಯಾರಿಸಲಾರದ) – ಪರಿಚಿತ ವಿಷಯದ ಮೇಲೆ ನಿರ್ಧಾರಿತ ಶಬ್ದಗಳಲ್ಲಿ ಮಾತನಾಡಬೇಕು.
15. ಔಪಚಾರಿಕತೆಯಿಂದ ಅನೌಪಚಾರಿಕತೆಯನ್ನು ಮುಕ್ತಪಡಿಸುವ ಸಾಕಷ್ಟು ಸಂಭಾಷಣೆಗಳ ಪದ್ಧತಿಗಳನ್ನು ಕಲಿಯಬೇಕು.
16. ವ್ಯಕ್ತಿತ್ವ ವಿಕಾಸ, ಪಾತ್ರದ ಬೆಳವಣಿಗೆ, ಸಾಮಾಜಿಕ ಜೀವನದಲ್ಲಿ ಭಾಗವಹಿಸಲು ಭಾಷೆಯ ಬಳಕೆಯನ್ನು ಮಾಡಲು ಕಲಿಯಬೇಕು.

## ಓದುವ ಕೌಶಲ್ಯಗಳು Reading Skills

1. ಕವಿತೆಯನ್ನು ಗಟ್ಟಿಯಾಗಿ ಓದಿ ಆನಂದಪಟ್ಟು ಅದರ ಲಯಬದ್ಧತೆಯನ್ನು ಹಾಗೂ ಇತರ ವಿಷಯಗಳನ್ನು ಆಸ್ವಾದಿಸುವುದು.
2. ಯಾವ ತರಹದ ಬರಹ ಇದೆ ಎಂಬುದನ್ನು ತಿಳಿದುಕೊಂಡು ಉಚಿತವಾದ ವೇಗದಿಂದ ಮನಸ್ಸಿನಲ್ಲಿ ಓದುವುದು.
3. ಆನಂದಿತರಾಗಲು ಆತ್ಮಕಥೆ, ಪ್ರವಾಸಕಥನ, ನಾಟಕ, ಸಣ್ಣ ಕಥೆಗಳ, ಭಾಗಗಳನ್ನು ಓದುವುದು.
4. ವರ್ತಮಾನಪತ್ರ, ಜಾಹೀರಾತು, ಪ್ರಕಟಣೆ (ನೋಟೀಸು) ಕರಪತ್ರಗಳನ್ನು ತಿಳುವಳಿಕೆ ಬೆಳೆಸಲು ಓದಿಸಬೇಕು.
5. ಸಂಪೂರ್ಣ ಮಾಹಿತಿ, ಸುಸಂಬದ್ಧತೆ, ಸೂಚಿತ ಅರ್ಥ ಹಾಗೂ ವಿಚಾರಗಳ ಬೆಳವಣಿಗೆಯನ್ನು ತಿಳಿದುಕೊಳ್ಳಲು ಸಾಲು/ ಪುಟಗಳನ್ನು ಬಿಟ್ಟು ಮುಂದೆ ಓದುವುದು, ಗಮನಕೊಟ್ಟು ಪರಿಶೀಲಿಸುವುದು, ಹಾಗೂ ಅರ್ಥ ತಿಳಿದುಕೊಂಡು ಓದುವುದು ಮುಂತಾದ ತಂತ್ರಗಳನ್ನು ಉಪಯೋಗಿಸಿಕೊಳ್ಳುವುದು.
6. ಅಭ್ಯಾಸದ ಒಳ್ಳೆಯ ಹವ್ಯಾಸ ಬೆಳೆಸಲು ಹೆಚ್ಚು ಹೆಚ್ಚು ಓದಬೇಕು.
7. ಆನಂದ ಹಾಗೂ ಮಾಹಿತಿ ಪಡೆಯಲು ವಿವರವಾಗಿ ಓದುವುದು ಹಾಗೂ ಪ್ರಸಿದ್ಧ ಲೇಖಕರ ಮತ್ತು ಕವಿಗಳ ಸಾಹಿತ್ಯದ ಪರಿಚಯ ಮಾಡಿಕೊಳ್ಳಬೇಕು.
8. ಭಾಷೆಯ ಸೊಗಸು, ಅಲಂಕಾರ ಹಾಗೂ ಸಾಹಿತ್ಯದ ಇತರ ತಂತ್ರಗಳನ್ನು ಗುರುತಿಸಿ ತಿಳಿದುಕೊಳ್ಳಬೇಕು.
9. ಸಂಭಾಷಣೆಗಳನ್ನು ಮುಂದುವರೆಸುವ ಸಾಂಕೇತಿಕ ಶಬ್ದಗಳಾದ– ಆದರೂ, ಹೇಗಾದರೂ, ಹೆಚ್ಚಾಗಿ, ಅದರ ಬದಲಾಗಿ ಮುಂದೆ ಏನಾಗಬಹುದು ಎಂಬುದನ್ನು ಸೂಚಿಸುವ ಶಬ್ದಗಳ ಉಪಯೋಗಮಾಡಬೇಕು.
10. ಓದುವಾಗ ಘಟನೆಗಳ, ಪರಿಣಾಮಗಳ ಅಪೇಕ್ಷೆ ಮಾಡಿ ಮುಂದೆ ಆಗುವುದರ ವಿಚಾರ ಮಾಡಬೇಕು.
11. ಕೊಟ್ಟ ಪಾಠದಲ್ಲಿಯ ತರ್ಕಬದ್ಧ ಸಂಬಂಧಗಳನ್ನು ತಿಳಿದುಕೊಳ್ಳಬೇಕು.
12. ಸಂಬಂಧಪಟ್ಟ ಅಸಂಬದ್ಧವಾದ ಮಾಹಿತಿ, ನಿಜಾಂಶ, ಅಭಿಪ್ರಾಯ ಮುಂತಾದವುಗಳನ್ನು ತಿಳಿದುಕೊಳ್ಳುವುದು.
13. ಮಾಹಿತಿಯನ್ನು ಶಾಬ್ದಿಕ ರೂಪದಿಂದ ಆಕೃತಿಯಲ್ಲಿ ಹಾಗೂ ಆಕೃತಿಗಳನ್ನು ಶಬ್ದಗಳಲ್ಲಿ ಬದಲಿಸುವುದು.
14. ನಿಘಂಟು **(Dictionary), (Encyclopedia)** ಮುಂತಾದವುಗಳ ಉಪಯೋಗ ಮಾಡಿ ಪರಾಮರ್ಶೆ ಮಾಡುವ ಕೌಶಲ್ಯಗಳನ್ನು ಬೆಳೆಸಲು, ವಿಸ್ತೃತವಾದ ಹಾಗೂ ಅಧಿಕ ತಿಳುವಳಿಕೆ ಮೂಡಲು ಸಹಾಯ ಮಾಡುವುದು.

15. ಸಾಹಿತ್ಯದ ಶೈಲಿಯನ್ನು ತಿಳಿಯಬೇಕು ಹಾಗೂ ಆಸ್ವಾದಿಸಬೇಕು.

16. ಸೂಕ್ಷ್ಮ ಸಂವೇದನೆಯನ್ನುಬೆಳೆಸಲು ಭಾಷೆ ಹಾಗೂ ಅದರ ಸಾಹಿತ್ಯವನ್ನು ಆಸ್ವಾದಿಸಿ ಆನಂದಪಡಬೇಕು.

## ಬರವಣಿಗೆಯ ಕೌಶಲ್ಯಗಳು Writing skills

**ವಿದ್ಯಾರ್ಥಿಗಳಿಗೆ ಕೆಳಗಿನ ಸಂಗತಿಗಳು ತಿಳಿಯಲು ....**

1. ಬರೆಯುವ ವೇಗ ಉಚಿತವಾಗಿಟ್ಟು ಸರಿಯಾಗಿ, ನೀಟಾಗಿ, ಸ್ಪಷ್ಟವಾಗಿ ಓದಲು ಬರುವಂತೆ ಬರೆಯಬೇಕು.
2. ಬರವಣಿಗೆಯ ತಯಾರಿ, ರಚನೆ, ಹೊಸ ತಯಾರಿಕೆ ಹಾಗೂ ಪುನರಧ್ಯಯನ ಮುಂತಾದ ಬರವಣಿಗೆಯ ತಂತ್ರಗಳ ಪ್ರಭುತ್ವ ಪಡೆಯಬೇಕು.
3. ಪಠ್ಯಪುಸ್ತಕದಲ್ಲಿಯ ಹಾಗೂ ಅಪಠಿತ ಗದ್ಯ ಹಾಗೂ ಪದ್ಯಗಳಲ್ಲಿಯ ಅಲಂಕಾರ, ಭಾಷೆಯ ಸೊಗಸು, ಸಾಹಿತ್ಯದ ತಂತ್ರ ಮುಂತಾದವುಗಳ ಮೇಲೆ ಬರುವ ಪ್ರಶ್ನೆಗಳಿಗೆ ಉತ್ತರ ಬರೆಯಬೇಕು.
4. ಸೂಚನೆ, ಭಿತ್ತಿಪತ್ರ, ಕರಪತ್ರ, ಸುದ್ದಿ ಹಾಗೂ ಜಾಹೀರಾತು ಮುಂತಾದವುಗಳ ಮೂಲಕ ಮಾಹಿತಿ ತಿಳಿಸಲು (ಬರೆಯಲು) ಕಲಿಸುವುದು.
5. ಔಪಚಾರಿಕ ಮತ್ತು ಅನೌಪಚಾರಿಕ ಪತ್ರಗಳನ್ನು ಬರೆಯುವುದು.
6. ಘಟನೆ, ವಸ್ತುಗಳ ಹಾಗೂ ಪದ್ಧತಿಗಳ ವರ್ಣನೆ / ನಿರೂಪಣೆಯನ್ನು ಸುಸಂಬದ್ಧವಾಗಿ ಬರೆಯಬೇಕು.
7. ಪ್ರಾರಂಭದ ಕೆಲವು ಅಂಶಗಳಿಂದ ಕೊಟ್ಟ ಕಥೆಗಳನ್ನು ಪೂರ್ಣಗೊಳಿಸಬೇಕು.
8. ಬಹಿರಂಗ ಪಡಿಸುವ /ಚರ್ಚೆ ಮಾಡುವಂತಹ ವಿಷಯಗಳ ಮೇಲೆ 200 ರಿಂದ 250 ಶಬ್ದಗಳಲ್ಲಿ ನಿಬಂಧ ಬರೆಯಬೇಕು.
9. ಪ್ರಿನ್ಸಿಪಾಲರ ಆಫೀಸಿನಲ್ಲಿ, ರೈಲು ನಿಲ್ದಾಣ, ಬಸ್ ನಿಲ್ದಾಣಗಳಲ್ಲಿಯ ವಿಚಾರಣೆಯ ಕೊಠಡಿ (Enquiry counter) ಮುಂತಾದ ಸ್ಥಳಗಳಲ್ಲಿ ಆದ ಸಂದರ್ಭಕ್ಕೆ ತಕ್ಕ ಸಂಭಾಷಣೆಯನ್ನು ತಯಾರಿಸಬೇಕು.
10. ಸಂಭಾಷಣೆ, ಸಂದರ್ಶನ, ರೇಡಿಯೋ ಮಾತು ಇವುಗಳ ಮೇಲೆ ವರದಿ ಬರೆಯಬೇಕು.
11. ಪಠ್ಯಪುಸ್ತಕದಲ್ಲಿಯ ಪಾಠದ ಸಾರಾಂಶ ಹೇಳುವಾಗ ಟಿಪ್ಪಣಿ ಬರೆಯಬೇಕು. (make notes)
12. ಸಂಕ್ಷಿಪ್ತ ವರದಿ, ಸೂಚನಾಪತ್ರ, ಅರ್ಹತಾವಿವರ (curriculam vitae) ಮುಂತಾದವುಗಳನ್ನು ಬರೆಯಬೇಕು.
13. ಶಾಬ್ದಿಕ ಘಟಕಗಳ ಆಕೃತಿಯಲ್ಲಿ ಹಾಗೂ ಆಕೃತಿಗಳನ್ನು ಶಬ್ದರೂಪದಲ್ಲಿ ಬರೆಯಬೇಕು.
14. ಶಾಲೆಯ ನಿಯತಕಾಲಿಕೆ, ಪತ್ರಿಕೆಗಳಲ್ಲಿ ಲೇಖನಗಳನ್ನು ಬರೆಯಬೇಕು.

## 5. ಕೃತಿಪತ್ರಿಕೆಯ ನಮೂನೆಗಳು

**ಪ್ರ.1. ಕೆಳಗಿನ ಗದ್ಯ ಖಂಡವನ್ನು ಓದಿ ಕೊಟ್ಟ ಸೂಚನೆಗಳಿಗೆ ಅನುಸಾರವಾಗಿ ಕೃತಿ ಮಾಡಿರಿ. (ಗದ್ಯ)**

**1) ಬಿಟ್ಟ ಸ್ಥಳ ತುಂಬಿರಿ: (2)**

i) ಗುಂಗುರ ಕೂದಲದಂತೆ ದಟ್ಟ ಕಾಡುಗಳಿರುವಂತಹ ಭಾರತದ ದ್ವೀಪಗಳು ----- ಮತ್ತು ----ಆಗಿವೆ.

ii) ಅಂಡಮಾನಿನ ---- ಕಾಡುಗಳಲ್ಲಿ ಅಕ್ರಮ ಪ್ರವೇಶ ಮಾಡಿದರೆ ಶಿಕ್ಷಿಸುವ ಕಠಿಣ ಕಾನೂನುಗಳಿವೆ.

iii) ಗ್ರೇಟ್ ಅಂಡಮಾನಿಗಳೂ ಮತ್ತು ಓಂಗೀಗಳನ್ನು ---- ಕಾಣಬಹುದಿತ್ತು.

iv) ಕಡಲು ಹೇಳಿದಂತೆ ಕೇಳುವ ದ್ವೀಪ ------.

**(ಗದ್ಯಖಂಡ: ಅಂಡಮಾನ ನಿಕೋಬಾರ ಎಂಬುದು ------ ಸಾಧ್ಯವಾಯಿತು.ಪು:50 )**

**2) ಗುಂಪಿಗೆ ಸೇರದ ಪದ ಬರೆಯಿರಿ. (1)**

i) ಸೆಂಟಿನೀಲ್, ಜರವಾ, ಅಂಡಮಾನ, ನಿಕೋಬಾರ.

ii) ಸೆಂಟಿನೆಲೀಸರು, ಓಂಗೀಗಳು, ಬುಡಕಟ್ಟಿನವರು, ಶಾಂಪೇನರು.

iii) ಗೊಂಚಲು, ಹಿಂಡು, ಕೊಂಡು, ಗುಂಪು.

iv) ಚೌಕಟ್ಟು, ನಿಯಮ, ಬದ್ಧತೆ, ಕಾನೂನು.

**3) ವಿರುದ್ಧ ಪದ ಬರೆಯಿರಿ. (2)**

i) ನಿರ್ಜನ ಪ್ರದೇಶ × ---

ii) ಆಧುನಿಕ × ------

iii) ಮುಕ್ತ ಪ್ರದೇಶ × ------

iv) ವಿಶೇಷ ×--------

**4) ದ್ವೀಪಗಳಲ್ಲಿ ವಾಸಿಸುವ ಜನರ ಬದುಕಿನ ಬಗ್ಗೆ ನಿಮ್ಮ ಅಭಿಪ್ರಾಯಗಳನ್ನು ಬರೆಯಿರಿ. (2)**

**ಪ್ರ.2. ಕೆಳಗಿನ ಗದ್ಯಖಂಡವನ್ನು ಓದಿ ಕೊಟ್ಟ ಸೂಚನೆಗೆ ಅನುಸಾರವಾಗಿ ಕೃತಿ ಮಾಡಿರಿ.**

**1. ಕೆಳಗಿನ ಬಿಟ್ಟ ಸ್ಥಳಗಳನ್ನು ತುಂಬಿ ವಾಕ್ಯ ಪೂರ್ಣ ಮಾಡಿರಿ. (2)**

i) ಬದುಕಿನಲ್ಲಿ ದೇವರಿಗಿಂತ . . . . . . . . . ದೊಡ್ಡದಾಗಿದೆ.

ii) ಭಾವನೆಗಳಿಗೆ ಅಡಿಗಲ್ಲು ಹಾಕಲು ………… ಅವಶ್ಯವಾಗಿದೆ.

iii) ನಮಗೆ ಪ್ರಿಯವಾದ ದೇವರು …………….

iv) ದೇವರು ನಮ್ಮ ………..ಮಿತಿಗೆ ಒಳಗಾಗಿದ್ದಾನೆ.

**(ಗದ್ಯ 1. ಪುಟ ಸಂಖ್ಯೆ 26. ಜೀವನ ಮುಖ್ಯ…………. ಮಿತಿಯನ್ನು ತಾಳಿವೆ.)**

2. ಸಾಕಾರ ದೇವರು ಮತ್ತು ನಿರಾಕಾರ ದೇವರು ಈ ಕಲ್ಪನೆಗಳ ಕುರಿತು ಸ್ಪಷ್ಟೀಕರಣ ಮಾಡಿರಿ. (2)

**3. ಕೆಳಗಿನ ಪದಗಳಿಗೆ ವಿರುದ್ಧಾರ್ಥ ಪದ ಬರೆಯಿರಿ.** (2)

i. ಸಗುಣ × ____________ ii. ನಿರಾಕಾರ × ____________

iii. ಸ್ವರ್ಗ × ____________ iv. ಕಹಿಯಾದ × ____________

4. ಜೀವನ ಮುಖ್ಯ ಎಂಬುದನ್ನು ಲೇಖಕರ ಅಭಿಪ್ರಾಯದೊಂದಿಗೆ ನಿಮ್ಮ ವಿಚಾರವನ್ನು ಸ್ಪಷ್ಟಪಡಿಸಿರಿ. (2)

**ಪ್ರ.3. ಕೆಳಗಿನ ಗದ್ಯಖಂಡವನ್ನು ಓದಿ ಕೊಟ್ಟ ಸೂಚನೆಗೆ ಅನುಸಾರವಾಗಿ ಕೃತಿ ಮಾಡಿರಿ.**

**1. ಕೆಳಗಿನ ಯಾವುದೇ ಎರಡು ಹೇಳಿಕೆಗಳನ್ನು ಪೂರ್ಣಗೊಳಿಸಿರಿ.** (2)

i . ಡಯಲ್ ಅಪ್ ಸಂಪರ್ಕ ವಿಧಾನ ಎಂದರೆ .......................

ii. ಭಾರತ ಸಂಚಾರ ನಿಯಮಿತ ನಿಗಮ ಇದು ..................ಸಂಸ್ಥೆ.

iii. ಅಂತರ್ಜಾಲ ಸಂಪರ್ಕ ಸಾಧಿಸಬೇಕಾದರೆ.................ಜೋಡಿಸಬೇಕು.

iv. ಪೂರ್ವಭಾವಿಯಾಗಿ ಅಂತರ್ಜಾಲವನ್ನು ಬಳಸುವವರು ...........ಖಾತೆಯನ್ನು ಪಡೆಯಬೇಕು.

**(ಪುಟ – 47: ಇದು ದೂರವಾಣಿ ....................ದೂರವಾಣಿ ಸಂಪರ್ಕಕ್ಕೆ ಜೋಡಿಸಬೇಕು.)**

**2. ಸರಿಯೋ ತಪ್ಪೋ ಹೇಳಿರಿ.** (2)

i) ಅಂತರ್ಜಾಲ ಖಾತೆ ತೆರೆಯುವ ಪ್ರತಿ ಬಳಕೆದಾರರಿಗೆ ಎರಡು ದೂರವಾಣಿ ಸಂಖ್ಯೆಗಳನ್ನು ನೀಡಲಾಗುವುದು.

ii) ಅಂತರ್ಜಾಲ ಸಂಪರ್ಕ ಸಾಧಿಸಲು ಕಂಪ್ಯೂಟರ್ ಮಾಡೆಮ್ ಮೂಲಕ ಕಾರ್ಯನಿರತ ದೂರವಾಣಿಯ ಸಂಪರ್ಕಕ್ಕೆ ಜೋಡಿಸಬೇಕು.

iii) ಸ್ಥಳೀಯ ಅಂತರ್ಜಾಲ ಸೇವಾ ವಿತರಕರ ನಿಗದಿತ ದೂರವಾಣಿಸಂಖ್ಯೆಯೊಂದನ್ನು ಕಂಪ್ಯೂಟರ ಮೂಲಕ ಡಯಲ್ ಮಾಡಬೇಕು.

iv) ಗರಿಷ್ಟ ಕೇವಲ 57 ಕೆಬಿಪಿಎಸ್ ವೇಗದಲ್ಲಿ ಮಾತ್ರ ಮಾಹಿತಿ ವರ್ಗಾವಣೆ ಸಾಧ್ಯ.

**3. ಸರಿಯಾದ ವಿಧಾನವನ್ನು ಆಯ್ಕೆ ಮಾಡಿ ಬರೆಯಿರಿ.** (2)

i) Internet ಎಂದರೆ – ಮಂತ್ರಜಾಲ, ಅಂತರ್ಜಾಲ, ಅಂತಜಾಲ

ii) BSNL ಎಂದರೆ – ಭಾರತ ಸಂಚಾರ ನಿಯಮ ನಿಗಮಿತ
ಭಾರತ ಸಂಸ್ಕಾರ ನಿಗಮ ನಿಯಮಿತ
ಭಾರತ ಸಂಚಾರ ನಿಗಮ ನಿಯಮಿತ

iii) Password ಎಂದರೆ – ಸಂಕೇತದ ಪದ್ಯ, ಸಂಕೇತದ ಪದ, ಸಂಕೇತದ ಪೇದೆ

iv) Kbps ಎಂದರೆ – ಕಿಲೋಬೈಟ್ಸ್ ಪ್ರತಿ ಸೆಕೆಂಡಿಗೆ

ಕಿಲೋ ಬೀಸಿ ಪ್ರತಿ ಸೆಕೆಂಡಿಗೆ

ಕಿಲೋ ಬಿಟ್ಸ್ ಪ್ರತಿ ಸೆಕೆಂಡಿಗೆ

4.ಡಯಲ್ ಅಪ್ ಸಂಪರ್ಕ ವಿಧಾನದ ಬಗ್ಗೆ ಮೇಲಿನ ಗದ್ಯಖಂಡದಲ್ಲಿಯ ವಿವರಣೆಯನ್ನು ಓದಿ ಸ್ವಲ್ಪದರಲ್ಲಿ ಬರೆಯಿರಿ. (2)

**ಪ್ರ. 4. ಕೆಳಗಿನ ಗದ್ಯಖಂಡವನ್ನು ಓದಿ ಕೊಟ್ಟ ಸೂಚನೆಗೆ ಅನುಸಾರವಾಗಿ ಕೃತಿ ಮಾಡಿರಿ.**

1. ಓಝೋನ್ ಪದರು ನಾಶವಾಗುತ್ತಿರುವ ಮುಖ್ಯ ಕಾರಣಗಳನ್ನು ಬರೆಯಿರಿ. (2)

**(ಇಂದು ಓಝೋನ ಪದರು............ ಎಂದು ಹೇಳಬಹುದು. ಪುಟ – 59)**

2. **ಕೆಳಗಿನ ಪೆಟ್ಟಿಗೆಗಳಲ್ಲಿ ಮಾನವ ನಿರ್ಮಿತ ರಸಾಯನಗಳ ಸಂಯುಕ್ತಗಳನ್ನು ಬರೆಯಿರಿ.** (1)

i. ☐ ii. ☐

3. **ಬಿಟ್ಟ ಸ್ಥಳಗಳನ್ನು ತುಂಬಿರಿ.** (2)

i) ಭೂಮಿಯು ಸದಾ ಸುತ್ತುತ್ತಿರುವುದರಿಂದ ..................

.....................................................

ii) ಮಾನವನು ತನ್ನ ಭೋಗ ವಿಲಾಸಿ ಜೀವನಕ್ಕಾಗಿ ರಚಿಸಿಕೊಳ್ಳುತ್ತಿರುವ ಅನುಕೂಲತೆಗಳು ಒಂದಿಲ್ಲೊಂದು ರೀತಿಯಲ್ಲಿ...............................................................

....................................................... .

4. ಪೆಟ್ರೋಲ್ –ಡಿಝೆಲ್‌ಗಳ ಮೇಲೆ ನಡೆಯುವ ವಾಹನಗಳಿಂದ ನಮ್ಮ ವಾತಾವರಣ ದೂಷಿತವಾಗುತ್ತಿದೆ. ಅದನ್ನು ತಡೆಯಲು ನೀವು ಏನೇನು ಮಾಡಬಹುದು ಎಂಬುದರ ಬಗ್ಗೆ ಒಂದು ಪರಿಚ್ಛೇದ ಬರೆಯಿರಿ. (ನೀವು ಸ್ವತಃ ಏನು ಮಾಡಬಲ್ಲಿರಿ? ವಿದ್ಯಾರ್ಥಿಯಾಗಿ ಯಾವ ಸಾಮಾಜಿಕ ಉಪಕ್ರಮ ಕೈಗೊಳ್ಳಬಲ್ಲಿರಿ? ಕಿರಿಯ ವಿದ್ಯಾರ್ಥಿಗಳಿಗೆ ಯಾವ ಸಲಹೆ ಕೊಡುವಿರಿ?) (2)

**ಪ್ರ. 5. ಕೆಳಗಿನ ಗದ್ಯಭಾಗವನ್ನು ಓದಿ ಅದರ ಅಡಿಯಲ್ಲಿ ನೀಡಿದ ಚಟುವಟಿಕೆಗಳನ್ನು ಮಾಡಿರಿ.**

1. **ಕೆಳಗಿನ ಪದಬಂಧವನ್ನು ಪೂರ್ಣಗೊಳಿಸಿರಿ.** (2)




**ಎಡದಿಂದ ಬಲಕ್ಕೆ:** 1. ಹುಡುಕಾಡು ಇದರ ಪರ್ಯಾಯ ಶಬ್ದ (4)

2.ಕೀರ್ತಿ ಈ ಶಬ್ದದ ಸಮಾನಾರ್ಥ ಪದ (3)

**ಮೇಲಿಂದ ಕೆಳಗೆ** : 1. ಮನುಷ್ಯನು ಇದರಿಂದ ಜಾಣನೆನಿಸಿಕೊಳ್ಳುವನು. (4)

2.ನಮ್ಮ ಶಾಲೆಯ ವೇಳಾಪತ್ರಿಕೆಯಲ್ಲಿ ಇರುವ ಸಂಗತಿ. (3)

**(ಶ್ಯಾಮಪ್ಪನವರ ಸಂಸಾರ ................ ಇದೆಲ್ಲವನ್ನು ನೆನೆಸಿಕೊಂಡರು. ಪುಟ 69, 70)**

2. ಮಾನವನು ಶಾಂತಿ ಸಮಾಧಾನದಿಂದ ಜೀವನ ಸಾಗಿಸಬೇಕಾದರೆ ಹೇಗಿರಬೇಕು ಎಂಬುದನ್ನು ನಿಮ್ಮ ಸ್ವಂತ

ವಿಚಾರಗಳಿಂದ ತಿಳಿಸಿರಿ. (2)

**3. ಕೆಳಗಿನ ಕೃತಿಯನ್ನು ಪೂರ್ಣ ಮಾಡಿರಿ.** (2)

ಶಾಮಪ್ಪನವರು ತೋಟವನ್ನು ರೂಪಿಸಲು ಮಾಡಿದ ಪ್ರಯತ್ನ.




**4. ಕೆಳಗಿನ ವಿಧಾನವನ್ನು ಪೂರ್ಣ ಮಾಡಿರಿ.** (1)

1) ............ ಶಾಮಪ್ಪನವರು ತಮ್ಮ ಉಳಿದ ಜೀವನವನ್ನು ತಮ್ಮ ಹಳ್ಳಿಯಲ್ಲಿಯೇ ಕಳೆದರು.

2) ಶಾಮಪ್ಪನವರದು.......... ಎಕರೆ ಹಿರಿಯರ ತಲೆಯಿಂದ ಬಂದ ಹೊಲವಿತ್ತು.

**5. ಆದರ್ಶ ರೈತನಾಗಬಯಸುವ ನಿಮ್ಮ ಗೆಳೆಯನಿಗೆ ಎಂಟು ಹತ್ತು ಸಾಲುಗಳಲ್ಲಿ ನಿಮ್ಮ ಸಲಹೆಗಳನ್ನು ನೀಡಿರಿ.** (2)

**ಪ್ರ. 6. ಕೆಳಗಿನ ಗದ್ಯಖಂಡವನ್ನು ಓದಿ ಕೊಟ್ಟ ಸೂಚನೆಗೆ ಅನುಸಾರವಾಗಿ ಕೃತಿ ಮಾಡಿರಿ.**

1. ರೈತನನ್ನು ಲೇಖಕರು ರಾಜನೆಂದು ಸಂಬೋಧಿಸಲು ಇರುವ ಕಾರಣಗಳನ್ನು ಬರೆಯಿರಿ. (2)

**(ದೇಶದ ರಕ್ಷಣೆಗಾಗಿ ................ ಬಹು ಮನೋಹರವಾದುದು- ಪುಟ 32)**

2. ಎಷ್ಟು ಪ್ರಕಾರದ ಕೋಟೆಗಳ ಬಗೆಗೆ ಈ ಗದ್ಯಖಂಡದಲ್ಲಿ ಹೇಳಲಾಗಿದೆ. ಅವುಗಳನ್ನು ಬರೆಯಿರಿ. (2)

i. ☐ ii. ☐ iii. ☐ iv. ☐

**3. ಕೆಳಗೆ ನೀಡಿದ ಹೇಳಿಕೆಗಳು ಸರಿಯೋ ತಪ್ಪೋ ಹೇಳಿರಿ.** (2)

i. ರಾಜನ ಈ ಕೋಟೆಯು ನಿತ್ಯನೂತನ.

ii. ಇಂದಿನದು ಹಿಂದಿಲ್ಲ ಇಂದಿನದು ಮುಂದಿಲ್ಲ.

iii. ಮೊದಲಿಗೆ ತನ್ನ ಅನ್ನದ ಕೋಟೆಯನ್ನು ಕಟ್ಟಲು ಶ್ರಮಿಸಿದ.

iv. ಆ ದೇಶದ ಪ್ರಾಣಿಗಳೆಲ್ಲರನ್ನು ರಕ್ಷಿಸುವ, ಅನ್ನದ ಕೋಟೆಯನ್ನು ರೈತರಾಜ ಕಟ್ಟುತ್ತಾನೆ.

4. ಈ ಗದ್ಯಖಂಡವನ್ನು ಓದಿದ ನಂತರ ರೈತನು ಪಡುವ ಕಷ್ಟದ ಬಗೆಗೆ ನಿಮಗೆ ಏನು ಅನಿಸುತ್ತದೆ. ಎಂಬುದನ್ನು 8-10 ಸಾಲುಗಳಲ್ಲಿ ಬರೆಯಿರಿ. (2)

**ಪ್ರ.7. ಕೆಳಗಿನ ಗದ್ಯಖಂಡವನ್ನು ಓದಿ ಕೊಟ್ಟ ಸೂಚನೆಗೆ ಅನುಸಾರವಾಗಿ ಕೃತಿ ಮಾಡಿರಿ.**

1. ಈ ಗದ್ಯಖಂಡದಲ್ಲಿ ಪರ್ಯಾವರಣದ ಯಾವ ಅವಶ್ಯಕತೆಯ ಬಗೆಗೆ ಸಮಾಜ ಜಾಗರೂಕತೆ ಮಾಡಲಾಗಿದೆ? (2)

**( ನಿಮ್ಮ ಮನೆಯ ಮಾಡು .................ನೇರ ಬಾವಿಗುಣಿಸಬಹುದು. ಪುಟ-41)**

**2. ಮೊದಲೆರಡು ಶಬ್ದಗಳಿಗೆ ಸಂಬಂಧಿಸಿದಂತೆ, ಮೂರನೆಯ ಪದಕ್ಕೆ ಸಂಬಂಧಿಸಿದ ಪದ ಬರೆಯಿರಿ.** (2)

i. ಮನೆಯ ಮಾಡು : ಕಸಕಡ್ಡಿಗಳು :: ಮಳೆನೀರು : ________________

ii. ಬಾವಿ : ಕೊಳವೆ ಬಾವಿ :: ನಲ್ಲಿ: ____________

iii. ಕೊಡ : ಬಿಂದಿಗೆ :: ಬಾಲ್ದಿ: ____________

iv. ಕಸ : ಗುಡಿಸು :: ಕೆಸರು : ____________

**3. ಗಮನಿಸಬೇಕಾದ ಈ ಶಬ್ದದ ಪ್ರತಿಯೊಂದು ಅಕ್ಷರದಿಂದ ಪ್ರಾರಂಭವಾಗುವ ಹೊಸ ಶಬ್ದಗಳನ್ನು ಬರೆಯಿರಿ.** (2)

ಉದಾ: ಗ ದಿಂದ –ಗಣಿತ

ಮ –

ನಿ –

ಸ –

ಬೇ –

ಕಾ –

ಗಿ –

ರು –

ವ –

**4.** ನೀರಿನ ಉಳಿತಾಯ ಮಾಡುವುದು ಏಕೆ ಅವಶ್ಯವಾಗಿದೆ ? ಮಹಾರಾಷ್ಟ್ರದಲ್ಲಿ ಈ ವರ್ಷ ಬಿದ್ದ ಬರಗಾಲದ ಸ್ಥಿತಿಯಲ್ಲಿ ನೀರಿನ ಉಳಿತಾಯ ಮಾಡಲು ನೀವು ಮನೆಯಲ್ಲಿ ಯಾವ ಕ್ರಮ ಕೈಗೊಂಡಿರಿ ಎಂಬುದರ ಬಗೆಗೆ 10–12 ಸಾಲುಗಳಲ್ಲಿ ಬರೆಯಿರಿ. (2)

**ಪ್ರ. 8. ಕೆಳಗಿನ ಗದ್ಯಖಂಡವನ್ನು ಓದಿ ಕೊಟ್ಟ ಸೂಚನೆಗೆ ಅನುಸಾರವಾಗಿ ಕೃತಿ ಮಾಡಿರಿ.**

**1. ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರ ಬರೆಯಿರಿ.** (1)

i. ರವಿಗೆ ಎಷ್ಟು ಜನ ಗೆಳೆಯರಿದ್ದರು? ಅವರ ಹೆಸರುಗಳನ್ನು ಬರೆಯಿರಿ.

ii. ರವಿಯು ಜೋಪಾನವಾಗಿ ಎದೆಯಲ್ಲಿಟ್ಟುಕೊಂಡ ಸಂಗತಿಗಳು ಯಾವುವು?

**(ರವಿಗೆ, ಅವರ ತಾಯಿಗೆ ...........ಎದೆಯಲ್ಲಿ ಇಟ್ಟುಕೊಂಡ. ಪುಟ– 63–64)**

**2. ಕೆಳಗಿನ ಶಬ್ದಗಳಿಗೆ ಗದ್ಯಭಾಗದಿಂದ ಅರ್ಥವನ್ನು ಆರಿಸಿ ಬರೆಯಿರಿ.** (1)

i. ಚೂಪುಮಾಡು [ ] ii. ಅಪ್ಪಿಕೊಳ್ಳು [ ]

**3. ಕೆಳಗಿನ ವಾಕ್ಯಗಳನ್ನು ಸರಿಪಡಿಸಿ ಬರೆಯಿರಿ.** (2)

i. ಕುಣಿಯತೊಡಗಿದವು ಬಿಡಿಸಿದ್ದ ಕಂಡಿದ್ದ ನೋಟ ಚಿತ್ರ ಕಣ್ಣ ಮುಂದೆ ಎಲ್ಲವೂ

ii. ನಿಮ್ಮ ಬಾಲ್ಯದ ಸುಂದರವಾದ ಸವಿನೆನಪುಗಳನ್ನು 10 – 12 ಸಾಲುಗಳಲ್ಲಿ ಬರೆಯಿರಿ. (2)

**ಪ್ರ. 9. ಕೆಳಗಿನ ಗದ್ಯಭಾಗವನ್ನು ಓದಿ ಕೊಟ್ಟ ಸೂಚನೆಗೆ ಅನುಸಾರವಾಗಿ ಕೃತಿ ಮಾಡಿರಿ.**

**1. ಕೆಳಗಿನ ಪ್ರಶ್ನೆಗಳಿಗೆ ಒಂದೇ ವಾಕ್ಯದಲ್ಲಿ ಉತ್ತರಿಸಿರಿ.**

**i.** ಮಾತಿಗೆ ಸಂಬಂಧಿಸಿದಂತೆ ಪ್ರಭುದೇವರ ವಚನ ಯಾವುದು? (1)

ii. ಮಾತು ಯಾವುದಕ್ಕೆ ಕಾರಣವಾಗಿದೆ? (1)

ನಾವು ನಮ್ಮ ಅಭಿಪ್ರಾಯಗಳನ್ನು ತಿಳಿದುಕೊಳ್ಳಲು ಮಾತನಾಡುವುದು ಅನಿವಾರ್ಯ. ದಿನನಿತ್ಯದ ವ್ಯವಹಾರದಲ್ಲಿ ಬಹು ಎಚ್ಚರಿಕೆಯಿಂದ ಮಾತನಾಡಬೇಕು. ನಾವು ಮಾತನಾಡುವ ಮಾತಿನಲ್ಲಿಯೇ ಜೀವನದ ಒಳಿತು ಕೆಡುಕುಗಳು ಅಡಗಿರುವವು. ''ಮಾತು ಬೆಳ್ಳಿ ಮೌನ ಬಂಗಾರ''ವಾಗಿರಬೇಕು. ಅಂತಲೇ ಹಿರಿಯರು ಮಾತಿನ ಮಹತ್ವವನ್ನು ನೀಡಿದ್ದಾರೆ. ಸರ್ವಜ್ಞನು ಮಾತಿನಿಂದ ನಗೆ, ನಡೆಯುವ ಹಣೆ, ಕೋತಿಯು ಆಗಬಲ್ಲದೆಂಬುದನ್ನು ತನ್ನ ವಚನದಲ್ಲಿ ತಿಳಿಸಿದ್ದಾನೆ. 'ಮಾತು ಆಡಿದರೆ ಹೋಯಿತು, ಮುತ್ತು ಒಡೆದರೆ ಹೋಯಿತು'. ಎಂಬ ಪಡೆನುಡಿ ಇಂದಿಗೂ ಪ್ರಚಲಿತವಿದೆ. ಆದುದರಿಂದ ನಾವು ಬೇರೆಯವರಿಗೆ ನೋವಾಗದಂತೆ ಎಚ್ಚರಿಕೆ ವಹಿಸಿ ಮಾತನಾಡಬೇಕು. ಬಸವಣ್ಣನವರ ಒಂದು ವಚನದಲ್ಲಿ ನುಡಿದರೆ ಮುತ್ತಿನ ಹಾರದಂತೆ, ಸ್ಫಟಿಕದ ಸಲಾಕೆಯಂತೆ, ಮಾಣಿಕ್ಯದ ದೀಪ್ತಿಯಂತಿರಬೇಕೆಂದು ಹೇಳಿ ಮಾತಿನ ಮಹತ್ವವನ್ನು ತಿಳಿಸಿಕೊಟ್ಟಿದ್ದಾರೆ. ಪ್ರಭುದೇವರು ''ಮಾತೆಂಬುದು ಜ್ಯೋತಿರ್ಲಿಂಗ'' ವೆಂದು ತಿಳಿಸಿರುವರು. ನುಡಿದರೆ ಲಿಂಗಮೆಚ್ಚಿ ಅಹುದಹುದೆಂದು ತಲೆ ಹಾಕುವಂತೆ ಮಾತನಾಡಬೇಕೆಂದು ಒಳ್ಳೆಯದಕ್ಕಾಗಲಿ, ಕೆಟ್ಟದಕ್ಕಾಗಲಿ ನಮ್ಮ ಮಾತೇ ಕಾರಣವಾಗಿದೆ. ಆದುದರಿಂದ ನಮ್ಮ ಪೂರ್ವಜರು ತಿಳಿಸಿದ ಮಾತಿನ ಮರ್ಮವನ್ನರಿತು ಹಿತಮಿತವಾಗಿ ಸಂದರ್ಭಕ್ಕೆ ತಕ್ಕಂತೆ ಮಾತನಾಡಿ ಜೀವನವನ್ನು ಉತ್ತಮ ಪಡಿಸಿಕೊಳ್ಳಬೇಕು. ಮಾತು ಬಲ್ಲವನಿಗೆ ಜಗಳವಿಲ್ಲ.

**2. ಮೇಲಿನ ಗದ್ಯಖಂಡಕ್ಕೆ ಅನುಸಾರವಾಗಿ ಮಾತಿನ ಮಹತ್ವ ತಿಳಿಸುವ ಎರಡು ಗಾದೆ ಮಾತನ್ನು ಆಯ್ದು ಬರೆಯಿರಿ.** (1)




**3. ಮಾತು ಮಾಣಿಕ್ಯ ಈ ಶಬ್ದ ಸಮೂಹದ ಅರ್ಥವನ್ನು ಸ್ಪಷ್ಟಪಡಿಸಿರಿ.** (1)

**ಪ್ರ. 10. ಕೆಳಗಿನ ಗದ್ಯಖಂಡವನ್ನು ಓದಿ ಕೊಟ್ಟ ಸೂಚನೆಗೆ ಅನುಸಾರವಾಗಿ ಕೃತಿ ಮಾಡಿರಿ.**

1. ಅತ್ತಿಂಬೇರು ಹಳೆಯ ನ್ಯೂಸ್ ಪೇಪರಿನಿಂದ ತಯಾರಿಸಿದ ವಸ್ತುಗಳ ಹೆಸರು ಬರೆಯಿರಿ. (2)

i............... ii............... iii.............. iv..............

**ಅಪಠಿತ ಗದ್ಯ/ ಮತ್ತೊಬ್ಬನ ಆತ್ಮಚರಿತ್ರೆ – 126**

ನಾನು ಮತ್ತೆ ನಮ್ಮ ಚಿಕ್ಕತ್ತೆಯ ಮನೆಗೆ ಹೋಗಲಿಲ್ಲ ಅಂದೆನಲ್ಲ, ನಮ್ಮಪ್ಪ ಎರಡು ಸಾರಿ ಹೋಗಿದ್ದರು. ಶನಿವಾರ ಮಧ್ಯಾಹ್ನ, ಅತ್ತಿಂಬೇರು, ಮೊದಲ ಸಾರಿಗೆ ಅರ್ಧ ಗಂಟೆ ಎದ್ದು ಕೂತು ಮೆಲ್ಲಗೆ ಸ್ವಲ್ಪ ಮಾತಾಡಿದರಂತೆ, ಎಲ್ಲರನ್ನೂ ವಿಚಾರಿಸಿದರಂತೆ, ಹಳೆಯ ನ್ಯೂಸ್‌ಪೇಪರ ತರಿಸಿ , ಹತ್ತು ನಿಮಿಷ ನಿಧಾನವಾಗಿ ಸಣ್ಣ ಹುಡುಗನ ಹಾಗೆ ಪೇಪರನ್ನ

ಚಚೌಕ ಹರಿದು ಮಡಿಸಿ ದೋಣಿ, ಕತ್ತಿ-ದೋಣಿ, ಅರಿಷಿಣ ಕುಂಕುಮದ ಬಟ್ಟಲು, ಕಡೆಗೆ ಒಂದು ರೆಕ್ಕೆ ಬಿಚ್ಚಿ ಹಾರುವಂಥ ಚೂಪು ಕೊಕ್ಕಿನ ಹಕ್ಕಿ ತಯಾರಿಸಿದರಂತೆ, ಆ ಹಕ್ಕಿಯನ್ನು ಮಾತ್ರ ನೀಡಿ, ಸುಸ್ತಾದ ದನಿಯಲ್ಲಿ, '' ರಾಮೂಗೆ ಕೊಡು.ಬಂದಾಗ ಮಾತಾಡಿಸೋ ತ್ರಾಣ ಕೂಡ ಇರಲಿಲ್ಲ. ಎತ್ತರ ಬೆಳೆದಿದ್ದಾನೆ,'' ಅಂದರಂತೆ, ಅಪ್ಪ ಜೇಬಿನಿಂದ, ಹಿಂದೂ ಪತ್ರಿಕೆಯ ಮದುವೆ ಜಾಹಿರಾತಿನ ಪುಟದಿಂದ ಒಂದು ಚಚೌಕ ಹರಿದು ಮಡಿಸಿ ಮಾಡಿದ ಚೂಪು- ಕೊಕ್ಕಿನ ಹಕ್ಕಿಯನ್ನು ಜೊಪಾನವಾಗಿ ತೆಗೆದುಕೊಟ್ಟರು. ಅಪ್ಪ,''ಅವರು ಯಾವಾಗಲೂ ಹೀಗೇ. ಏನಾದರೂ ಕೈಚಳಕದ ಕೆಲಸ ಬಹಳ. ಇಷ್ಟೆಲ್ಲ ಚಾಲಾಕಿದ್ದರೂ ಜೀವನದಲ್ಲಿ ಏನೂ ಮಾಡಲಿಲ್ಲ. ಪೋಸ್ಟಲ್ ಕ್ಲಾರ್ಕಾಗಿ ರಿಟೈರಾದರು,'' ಅಂದರು. ನಾನು ಆ ಕಾಗದದ ಹಕ್ಕಿಯನ್ನು ಅತ್ತ ಇತ್ತ ತಿರುಗಿಸಿ '' ಅದನ್ನು ಹೇಗೆ ಮಾಡಿದರು? '' ಅಂತ ನೋಡಿದೆ. ಅವರು ನಡುಗಿದ ಕೈಯಲ್ಲಿ ಹರಿದಿದ್ದರಿಂದ, ಮೂಲೆಗಳು ಅಂಚುಗಳು ನೇರವಾಗಿರಲಿಲ್ಲ. ಇದ್ದರೂ ಒಂದು ಗಳಿಗೆ, ಚಿಕ್ಕಂದಿನಲ್ಲಿ ಅವರು ತೋರಿಸಿದ ನೆರಳಿನ ಬಾತಿನ ಹಾಗೆ ಈ ಹಕ್ಕಿಯ ಬಾಲದ ಮಡಿಕೆ ಮುಚ್ಚಿದಾಗ ಬಿಚ್ಚಿಕೊಂಡು ಹರಡಿದ ಹಾಗೆ ಭಾಸವಾಯಿತು. ನಾನು ಅತ್ತ ಇತ್ತ ತಿರುಗಿಸಿದಾಗ ಮಡಿಕೆ ಬಿಚ್ಚಿ ನೋಡಿದಾಗ, ಅದು ನನ್ನ ಕೈಯಲ್ಲಿ ಮಡಿಕೆ ಗುರುತಿನ ಕಾಗದದ ಚೌಕವಾಗಿ, ನಾನು ಹೇಗೆ ಮಡಿಸಿ ನೋಡಿದರೂ ಅದು ಆಹಕ್ಕಿಯ ಆಕಾರ ಪಡೆಯಲಿಲ್ಲ. ಹಿಂದೂ ಪತ್ರಿಕೆಯ ಮದುವೆ ಜಾಹಿರಾತು ಮಾತ್ರ ಕೈಯಲ್ಲಿ ಉಳಿಯಿತು.

2. **ಒಂದೇ ವಾಕ್ಯದಲ್ಲಿ ಉತ್ತರಿಸಿರಿ.** (2)

i) ಅತ್ತಿಂಬೆಯವರು ಯಾವ ಕೆಲಸವನ್ನು ಮಾಡುತ್ತಿದ್ದರು?

ii) ಲೇಖಕ ಚಿಕ್ಕವರಿರುವಾಗ ಅತ್ತಿಂಬೆಯವರು ಕಾಗದವನ್ನು ಮಡಚಿ ಯಾವ ಪಕ್ಷಿಯನ್ನು ಮಾಡಿ ತೋರಿಸಿದ್ದರು?

3. ಅತ್ತಿಂಬೆಯವರು ಪೇಶಂಟ ಆಗಿದ್ದರು ಎಂಬುದನ್ನು ನಾವು ಯಾವ ಶಬ್ದಗಳಿಂದ ಗುರುತಿಸಬಹುದು? ಕೆಳಗೆ ಒಂದು ಉದಾಹರಣೆ ಕೊಡಲಾಗಿದೆ. ಎರಡು ಉದಾಹರಣೆಗಳನ್ನು ನೀವು ಬರೆಯಿರಿ. (2)

i) ಎದ್ದು ಕೂತು ಮೆಲ್ಲಗೆ ಸ್ವಲ್ಪ ಮಾತಾಡಿದರಂತೆ.

ii) ................................

iii) ............................

4. ಈ ಗದ್ಯಭಾಗದಲ್ಲಿ ಲೇಖಕರ ಹತ್ತಿರ ಅವರ ತಂದೆಯವರು ಅತ್ತಿಂಬೆ ಅವರ ಬಗ್ಗೆ ತೆಗೆದ ಉದ್ಗಾರದಿಂದ ಅತ್ತಿಂಬೆಯವರ ಸ್ವಭಾವದ ಬಗೆಗೆ ಏನು ಗೊತ್ತಾಗುವುದು? 8-10 ಸಾಲುಗಳಲ್ಲಿ ಬರೆಯಿರಿ. (2)

**ಪ್ರ. 11. ಕೆಳಗಿನ ಗದ್ಯಖಂಡವನ್ನು ಓದಿ ಕೊಟ್ಟ ಸೂಚನೆಗೆ ಅನುಸಾರವಾಗಿ ಕೃತಿ ಮಾಡಿರಿ.**

1. **ಕೆಳಗಿನ ಪ್ರಶ್ನೆಗಳಿಗೆ ಒಂದೇ ವಾಕ್ಯದಲ್ಲಿ ಉತ್ತರ ಬರೆಯಿರಿ.**

i. ಕಿಟ್ಟಿಗೆ ಏಕೆ ಸೋಜಿಗವಾಯಿತು? (1)

ii. ಮಾವ ಯಾರ ಜೊತೆಗೆ ಇಸ್ಪೀಟು ಆಡುತ್ತ ಕೂತಿರುತ್ತಿದ್ದರು? (1)

ಆಗಿದ್ದೆಲ್ಲ ಮರೆತು ಬಿಟ್ಟಂತೆ ಸುಟ್ಟು ಹೋದ ರಾಗಿ ಮೆದೆಗಳ ವಿಷಯ ಯಾರೂ ಮತಾಡದೆ ಇದ್ದುದು ಕಂಡು ಕಿಟ್ಟಿಗೆ ಸೋಜಿಗ. ಹೊಸೂರಿನ ಸ್ಕೂಲಿನಿಂದ ಬರುವಾಗ ಶಿವಗಂಗ ಕಂಡರೂ ಕಾಣದವನಂತೆ ಹೋಗುತ್ತಿದ್ದ. ಮೊದಲ ಹಾಗೆ ದುರುಗುಟ್ಟಿ ನೋಡುವುದಿಲ್ಲ. ಬಸಕ್ಕನ ಕಣ್ಣಿಗೆ ಬೀಳಬಾರದೆಂದು ಕಿಟ್ಟಿ ಸೆಟ್ಟರ ಅಂಗಡಿ ಪಕ್ಕದ ಸೊಂಪಲಲ್ಲಿ ಹಾದು ಹೋಗಿ ಬರತೊಡಗಿದ. ಮಾವ ಮೊದಲ ಹಾಗೆ ಹೊಸೂರಿನಲ್ಲೆ ಯಾವಾಗಲೂ ಇರುವುದಿಲ್ಲ. ಆಗೀಗ ಸೆಟ್ಟರ ಅಂಗಡಿಯಲ್ಲಿ ಚಾಟಿಸಾಬಿ,ಮರಗೆಲಸದ ಭಾಸ್ಕರ ಅವರ ಜೊತೆ ಇಸ್ಪೀಟು ಆಡುತ್ತ ಕೂತಿರುತ್ತಿದ್ದರು. ತಮ್ಮನ್ನು ಕಂಡರೆ 'ಹೊತ್ತಿಗೆ ಮುಂಚೆ ಮನೆಗೋಗಿ, ಕತ್ತಲಾಗತನಕ ಅಲ್ಲಿ ಇಲ್ಲಿ ನಿಂತ್ಕೊಬೇಡಿ ' ಎನ್ನುತ್ತಿದ್ದರು.

ಮನೆಗೆ ಬಂದು ಕೈಕಾಲು ಮುಖ ತೊಳಕೊಂಡ ಕಿಟ್ಟಿ ಉಂಡು ಚಾವಡಿ ಕಡೆ ಹೊರಟಾಗ ಅತ್ತೆ ಪೂಜೆ ತಟ್ಟೆಯಲ್ಲಿ ಕೊಣಮಾವಿನ ಪತ್ರೆ, ಗಂಧದ ಕಡ್ಡಿ, ಎಣ್ಣೆ ಬಟ್ಟಲು ಇಟ್ಟುಕೊಂಡು 'ಕಿಟ್ಟಿ ಗುಡಿ ಕಟ್ಟೆಗೋಗಿ ಬರದ ಬಾ ' ಎಂದಾಗ ಮಾತಾಡದೆ ಹೊರಟ. ಅತ್ತೆ ಎಷ್ಟೋ ಸಲ ತನ್ನನ್ನು ಅಲ್ಲಿಗೆ ಕರೆದುಕೊಂಡು ಹೋಗಿದ್ದರು. ಹಳ್ಳದ ಹೊಲದ ಪಕ್ಕದಲ್ಲೆ ಸುತ್ತ ಮುತ್ತ ಮೆಳೆ ಬೆಳೆದು ಕಾಡಿನಂತಿದ್ದ ಗುಡಿಕಟ್ಟೆ ದೇವಸ್ಥಾನಕ್ಕೆ ಬಾಗಿಲೇ ಇಲ್ಲ. ಮುಂದೆ ಸಣ್ಣ ಕೊಳ, ಅತ್ತೆಯೊಡನೆ ಗುಡಿಯೊಳಗೆ ಕಾಲಿಟ್ಟ ತಕ್ಷಣ ಕತ್ತಲು ಬಡಿದಂತಾಗಿ ಕ್ರಮೇಣ ಒಳಗಿನದೆಲ್ಲ ಗೋಚರಿಸತೊಡಗಿತು. ಒಂದೆರೆಡು ಚಕ್ಕಳದ ಹಕ್ಕಿಗಳು ಪಟಪಟ ರೆಕ್ಕೆ ಬಡಿಯುತ್ತ ಹೊರಗೆ ಹಾರಿದವು. ಅತ್ತೆ ಕಡ್ಡಿಗೀರಿ ದೀಪ ಹತ್ತಿಸಿದರು. ಸಣ್ಣದೊಂದು ಕಲ್ಲಿನ ಹಣತೆ-ಬೆಳಕು ಗುಡಿಯನ್ನೆಲ್ಲ ಆಕ್ರಮಿಸಿತು. ಮೊದಮೊದಲು ಕಿಟ್ಟಿಗೆ ಬರಲು ತುಂಬಾ ಭಯ. ನಾಯಿ – ಕಿರುಬನ ಹೆಜ್ಜೆ ಗುಡಿಯ ಅಂಗಳದಲ್ಲೆಲ್ಲ ಕಾಣುತ್ತಿದ್ದವು. ಈಗೀಗ ಕಿರುಬಗಳು ಬರುವುದು ಅಪರೂಪ. ಗುಡಿ ಪಕ್ಕದ ಹುಣಸುಳ್ಳಿ ಹಣ್ಣಿಗೆ ಈಗ ಬಂದು ಸಲೀಸಾಗಿ ಬಿಟ್ಟಿದೆ. ಅತ್ತೆ ಕೈ ಮುಗಿದು ತುಂಬ ಹೊತ್ತು ನಿಂತೇ ಇದ್ದರು. ಕಿಟ್ಟಿ ಹೊರಗೆ ನೋಡಿದ. ಮಬ್ಬು ಕವಿಯತೊಡಗಿತ್ತು. ಅತ್ತೆಯ ಸೀರೆ ಜಗ್ಗಿ ' ಕತ್ತಲಾಗ್ತುಬುಡ್ತು ಅತ್ತೆ ' ಎಂದ. ಹೊರಗೆ ಬಂದರು. ಹೊಲಗಳನ್ನು ದಾಟಿ ಓಣಿಗೆ ಬಂದಾಗ ಊರ ಕಡೆ ಹೊರಟ ದನಕರುಗಳ ಧೂಳು ತುಂಬಿತ್ತು.

ಮಳೆಗಾಲ ಮುಗಿದಂತೆ ದನ ಕಾಯುವ ಹೈಕಳು ನಾಟಕದ ಪದ ಹಾಡುತ್ತ ಹೋಗುತ್ತಿದ್ದವರು ಇದ್ದಕ್ಕಿದ್ದಂತೆ ಅತ್ತೆ ಕಂಡೊಡನೆ ನಿಲ್ಲಿಸಿ ಬಿಟ್ಟರು. ದನ ಸರಿಸಿ ತಾವು ಮುಂದೆ ಹೋಗಲು ದಾರಿ ಮಾಡಿಕೊಟ್ಟರು. ತಾವು ಮುಂದೆ ಮುಂದೆ ಮನೆ ಕಡೆ ಹೊದಂತೆಲ್ಲ ಹಿಂದಿನಿಂದ ಮತ್ತೆ ಅವರ ಹಾಡುಗಳು ಕೇಳತೊಡಗಿದವು.

**2. ಯೋಗ್ಯ ಪರ್ಯಾಯಗಳಿಂದ ಬಿಟ್ಟಿರುವ ಸ್ಥಳಗಳನ್ನು ತುಂಬಿರಿ.** (2)

i) ಪೂಜೆಯ ತಟ್ಟೆಯಲ್ಲಿ......................ಇದ್ದವು.
( ಕಡ್ಡಿಪೆಟ್ಟಿಗೆ, ಹೂವು/ ಕೊಣಮಾವಿನ ಪತ್ರೆ/ ಗಂಧದ ಕಡ್ಡಿ )

ii) ಹಳ್ಳದ ಹೊಲದ ಪಕ್ಕದಲ್ಲಿ .................ಇತ್ತು (
ಮೆಳೆ ಬೆಳೆದು ಕಾಡಿನಂತಿದ್ದ ಗುಡಿಕಟ್ಟೆ/ಚಾವಡಿ ಕಟ್ಟೆ/ಮನೆಕಟ್ಟೆ )

iii) ಗುಡಿಯೊಳಗೆ.................... ಇದ್ದವು. (
ತೊಗಲು ಬಾವಲೆಗಳು/ಒಂದೆರೆಡು ಚಕ್ಕಳದ ಹಕ್ಕಿಗಳು/ಪಾತರಗಿತ್ತಿಗಳು )

iv) ಗುಡಿಯ ಅಂಗಳದಲಿ ..................ಹೆಜ್ಜೆಗಳು ಕಾಣುತ್ತಿದ್ದವು. (

ಇಲಿ, ಮನುಷ್ಯನ/ ಹುಲಿ,ಕಿರುಬುಗಳ/ ನಾಯಿ, ಕಿರುಬನ )

**3. ಮೇಲಿನ ಗದ್ಯಭಾಗದಲ್ಲಿ ಬರುವ ಕೆಳಗಿನ ಶಬ್ದಗಳನ್ನು ಪೂರ್ಣಮಾಡಿರಿ.** (2)

1) ....ಕ್ಕಿ....ಳು. 2) ...ಣ....ನ 3. ಮಾ.......ದೆ 4. .. ಡಿಯೋ.

**4.** ಈ ಗದ್ಯ ಖಂಡದಲ್ಲಿ ಬಂದ ಊರು ಎಂತಹ ಭಾಗದಲ್ಲಿ ಇರಬಹುದು ಎಂಬುದನ್ನು ವಿಚಾರ ಮಾಡಿರಿ, ಅಲ್ಲಿ ದಿನದ ಯಾವ ಭಾಗದ ವರ್ಣನೆ ಮಾಡಲಾಗಿದೆ ಎಂಬುದನ್ನು ಉದಾಹರಣೆ ಸಹಿತ 10-12 ಸಾಲುಗಳಲ್ಲಿ ಬರೆಯಿರಿ. (2)

**ಪ್ರ. 12. ಕೆಳಗಿನ ಪದ್ಯವನ್ನು ಓದಿ ಕೊಟ್ಟ ಸೂಚನೆಗೆ ಅನುಸಾರವಾಗಿ ಕೃತಿ ಮಾಡಿರಿ.**

**1. ಕೆಳಗಿನ ಹೇಳಿಕೆಗಳನ್ನು ಪೂರ್ಣಮಾಡಿರಿ.** (2)

i. ಕನ್ನಡದ ದೀಪವು [ ], [ ] ಮತ್ತು [ ] ದೀಪವಾಗಿದೆ (1)

**ii.** ಕವಿಯು ನೆನಪಿಡಲು ಹೇಳಿರುವ ಸಂಗತಿಗಳು: i. _____ ii. _____ iii. _____ (1)

**( ಹಚ್ಚೇವು ಕನ್ನಡದ ದೀಪ :- ಪುಟ-16; ಮೊದಲೆರಡು ಪದ್ಯ ವೃಂದಗಳು )**

**2. ಕೆಳಗಿನ ಪದ್ಯದ ಸಾಲಿನ ಭಾವಾರ್ಥವನ್ನು ಬರೆಯಿರಿ.** (2)

ಮನೆ ಮನೆಗಳಲ್ಲಿ ಮನಮನಗಳಲ್ಲಿ ಹಚ್ಚೇವು ಕನ್ನಡದ ದೀಪ

3. ಕನ್ನಡದ ಕಳೆಯನ್ನು ಎಲ್ಲಿ ಎಲ್ಲಿ ಕೆಚ್ಚೇವು ಎಂದು ಕವಿ ಹೇಳಿರುವರು? (1)

4. ಕನ್ನಡದ ಅಭಿವೃದ್ಧಿಗಾಗಿ ನೀವು ಕೈಗೊಳ್ಳುವ ಕಾರ್ಯಗಳನ್ನು ಬರೆಯಿರಿ. (2)

**ಪ್ರ.13. ಕೆಳಗಿನ ಪದ್ಯವನ್ನು ಓದಿ ಕೊಟ್ಟ ಸೂಚನೆಗೆ ಅನುಸಾರವಾಗಿ ಕೃತಿ ಮಾಡಿರಿ.**

**1. ಕೆಳಗಿನ ಬಿಟ್ಟಸ್ಥಳಗಳನ್ನು ತುಂಬಿರಿ.** (2)

i) ಪೊಡವಿಗೆ ಒಡೆಯನು...........ಅಡಗಿಕೊಂಡಿದ್ದಾನೆ.

ii) ಧೀರ ನಿರ್ಗುಣನುಸಾರ ............ ತೋರುವನು.

iii) ................ ಭಾರಿಸುನಾದದಿ ಮೀರಿನಂದ ತೋರಿ ಹೊಳೆಯುತಿಹನು.

iv) ಯೋಗಿರಾಜ ................ ಪರಾತ್ಪರ ಬ್ರಹ್ಮರೂಪ ಹೊಂದಿದ್ದಾನೆ.

**(ಗುಡಿಯ ನೋಡಿರಿದು.................................ಪರಾತ್ಪರ ಬ್ರಹ್ಮರೂಪನಿಹ. ಪುಟ-12)**

**1. ಕೆಳಗಿನ ತತ್ಸಮ ತದ್ಭವಗಳನ್ನು ಹೊಂದಿಸಿ ಬರೆಯಿರಿ.** (2)

| ಅ | ಬ |
|---|---|
| i) ಪೊಡವಿ | 1) ಬೊಮ್ಮ |
| ii) ಬೆಡಗು | 2) ಗಟ್ಟಿ |
| iii) ಘಟ್ಟಿ | 3) ಪೊಟವಿ |

iv) ಬ್ರಹ್ಮ 4) ಬೆಡಂಗು

2. **ಉದಾಹರಣೆಯಲ್ಲಿ ತೋರಿಸಿದಂತೆ ಪದ್ಯದ ಸಹಾಯದಿಂದ ನಾಲ್ಕು ಆದಿಪ್ರಾಸದ ಜೋಡಿಗಳನ್ನು ಗುರುತಿಸಿ ಬರೆಯಿರಿ.** ಉದಾ:

ಅಡಗಿಕೊಂಡು – ಗುಡಿಯ (2)

i) ................. ii)..................... iii)............... iv) .................

3. ಕವಿಯು ದೇಹದ ಗುಡಿಯ ಬಗ್ಗೆ ಮಾಡಿದ ಬಣ್ಣನೆಯನ್ನು ಬರೆಯಿರಿ. (2)

**ಪ್ರ. 14. ಕೆಳಗಿನ ಪದ್ಯವನ್ನು ಓದಿ ಕೊಟ್ಟ ಸೂಚನೆಗೆ ಅನುಸಾರವಾಗಿ ಕೃತಿ ಮಾಡಿರಿ.**

1. **ಕೆಳಗಿನ ಶಬ್ದಗಳನ್ನು ಶುದ್ಧ ಗ್ರಾಂಥಿಕ ಭಾಷೆಯ ರೂಪದಲ್ಲಿ ಬರೆಯಿರಿ.** (2)

i ಹಡೆದವ್ವ ii ಬೈಬ್ಯಾಡ iii ಮರುಗ್ಯಾಳ iv ನಿನ್ನ್ಯಾರ

**(ನಿನ ಹೊರತು ತವರಿಲ್ಲ; ಪುಟ- 1)**

2. **ಕೆಳಗಿನ ಶಬ್ದಗಳಲ್ಲಿ ಬಿಟ್ಟು ಹೋದ ಅಕ್ಷರಗಳನ್ನು ಸೇರಿಸಿ ಅರ್ಥಪೂರ್ಣವಾದ ಪದವನ್ನು ಬರೆಯಿರಿ.** (2)

i. ಒಲಿ....ಗ iii. ....ನ....ಗ

ii. ...ಯ...ನ iv. ತಿ...ಗೇ....

4. ತಾಯಿ ನಮ್ಮ ಕಣ್ಣಿಗೆ ಕಾಣುವ ಗುರು. ಅವಳ ವಾತ್ಸಲ್ಯ ಮತ್ತು ಪ್ರೀತಿಯ ಬಗ್ಗೆ ಬರೆಯಿರಿ. (2)

**ಪ್ರ. 15. ಕೆಳಗಿನ ಪದ್ಯಖಂಡವನ್ನು ಓದಿ ಕೊಟ್ಟ ಸೂಚನೆಗಳಿಗೆ ಅನುಸಾರವಾಗಿ ಕೃತಿ ಮಾಡಿರಿ. (ಪದ್ಯ)**

**1) ಕೆಳಗಿನ ವಾಕ್ಯಗಳನ್ನು ಪೂರ್ಣಗೊಳಿಸಿರಿ.** (2)

i) ಮಂಗಳಮಯ ಕುಮಾರನನ್ನು ಚಂದ್ರಮತಿಯು ಪಟ್ಟಿರಿಸಿ ಆಡಿದ ಮಾತುಗಳು:

ಕ)------------------- ಖ) ------------------

ii) ಭೂಪಾಲನು ಚಂದ್ರಮತಿಗೆ ನೀಡಿದ ಎಚ್ಚರಿಕೆಗಳು:

ಗ)-------------------- ಘ) ------------------

**(ಪದ್ಯಖಂಡ: ಗಳಗಳನೆ ಮುನ್ನ ------- ಬಿಡನೆಂದನು. ಪುಟ-9)**

2) "ಬೇಡ ಬೇಡ "ಎಂಬ ಶಬ್ದ ಪ್ರಯೋಗದಂತೆಯೇ ಪದ್ಯದಲ್ಲಿ ಬಳಸಿದ ಇತರ ಎರಡು ದ್ವಿರುಕ್ತಿಗಳನ್ನು ಆರಿಸಿ ಬರೆಯಿರಿ. (2)

3) i) ಮೇಲಿನ ಪದ್ಯವು ------ಛಂದಸ್ಸಿನಲ್ಲಿ ರಚಿಸಲ್ಪಟ್ಟಿದೆ. (1)

ii) ಮೇಲಿನ ಪದ್ಯದ ಮೊದಲ ಮೂರು ಸಾಲುಗಳಿಗೆ ಪ್ರಸ್ತಾರ ಹಾಕಿ, ಗಣ ವಿಂಗಡಿಸಿರಿ. (1)

**4)** (2)



ಮಾಡುವಾಗ ಪಟ್ಟ ಕಷ್ಟಗಳು

**ಪ್ರ. 16. ಕೆಳಗಿನ ಪದ್ಯಭಾಗವನ್ನು ಓದಿ ಅದರ ಅಡಿಯಲ್ಲಿ ನೀಡಿದ ಚಟುವಟಿಕೆಗಳನ್ನು ಮಾಡಿರಿ.**

**1. ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರ ಬರೆಯಿರಿ.** (2)

i. ಪದ್ಯದಲ್ಲಿ ಬಂದಿರುವ ದಿಕ್ಕಿನ ಹೆಸರೇನು ?

ii. ಕತ್ತಲೆಯ ನೆನಪು ಕಳೆಯುವುದು ಯಾವುದು?

iii. ಹೊಸ ×ಹಳೆ, ಈ ರೀತಿಯ ವಿರುದ್ಧ ಪದಗಳನ್ನು ಹುಡುಕಿ ಬರೆಯಿರಿ.

iv. ತಂಬೆಳಕು ಈ ಪದಕ್ಕೆ ಸರಿ ಹೊಂದುವ ಪದ ಯಾವುದು ?

**2. ಅರ್ಥಪೂರ್ಣ ಶಬ್ದಗಳನ್ನು ಹುಡುಕಿ ಬರೆಯಿರಿ.** (2)

ಅ ಕ ಬೆ ಲೆ ಲಿ ಸಿ ತ್ತ

ತಂ ಳ ಉ ಕೆ ಕು ರು ಳ

i........... . ii................. .

iii. ............ . iv............ .

3. ಕವಿತೆಯಲ್ಲಿ ವ್ಯಕ್ತವಾದ ಆಶಾವಾದವೇನು? ಎಂಬುದನ್ನು ಸ್ಪಷ್ಟಪಡಿಸಿರಿ. (2)

4. ಇನ್ನು ಮುಂದೆ ಏನನ್ನು ಕಾಣಲು ಕವಿ ಬಯಸುತ್ತಾರೆ ಎಂಬುದನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ. (2)

**ಪ್ರ. 17. ಕೆಳಗಿನ ಪದ್ಯಭಾಗವನ್ನು ಓದಿ ಅದರ ಅಡಿಯಲ್ಲಿ ನೀಡಿದ ಚಟುವಟಿಕೆಗಳನ್ನು ಮಾಡಿರಿ.**

**1. ಯೋಗ್ಯ ಪರ್ಯಾಯವನ್ನು ಆಯ್ದು ವಾಕ್ಯ ಪೂರ್ಣ ಮಾಡಿರಿ.** (ಬಸವ, ಭಂಡಾರಿ, ಹರನ, ಗಣಕ) (2)

i. ಮೆರೆವ ........... ರಾಗದಿಂ ಬಂದನು. ii. ಭಂಡಾರಿಯುಂ ............ ರುಂ ಮತ್ತೆ ನೋಡಿದನು.

iii. ತಪ್ಪಿದುದನು ಅರಿತನು ......... ರಾಜನು. iv. ............. ಕಾರುಣ್ಯವಿದು.

**(ಪದ್ಯ 3. ಭಕ್ತನೊಡವೆ ಕೆಡಲಾಗದಿದು ಪುಟ– 6 ಬಂದನಲ್ಲಿಗೆ ................ ಭಾಗ್ಯವಿದು.)**

2. **ಪದ್ಯದಲ್ಲಿ ಬಂದಿರುವ ಸಂಖ್ಯಾವಾಚಕ ಪದಗಳನ್ನು ಆಯ್ದು ಬರೆಯಿರಿ.** (2)

i........... . ii................. . iii............ . iv............ .

3. **ಕೆಳಗಿನ ಪದಗಳಿಗೆ ಸರಿ ಹೊಂದುವ ಪದಗಳನ್ನು ಆಯ್ದು ಬರೆಯಿರಿ.** (2)

i) ಪ್ರೀತಿಯಿಂದ: ............. iii) ವ್ಯಯ: ...............

ii) ಸೋಜಿಗ............ iv) ಕಾರಕೂನರು............

4) ಬಸವಣ್ಣನವರ ಜಾಣ್ಮೆಯ ಕುರಿತು ನಿಮ್ಮ ಮಾತುಗಳಲ್ಲಿ ಬರೆಯಿರಿ. (2)

**ಪ್ರ.18. ಕೆಳಗಿನ ಪದ್ಯಭಾಗವನ್ನು ಓದಿಕೊಂಡು ಕೊಟ್ಟ ಸೂಚನೆಗೆ ಅನುಸಾರವಾಗಿ ಕೃತಿ ಮಾಡಿರಿ.**

**1. ಹೊಂದಿಸಿ ಬರೆಯಿರಿ.** (2)

| | ಅ ವಿಭಾಗ | ಬ ವಿಭಾಗ | ಉತ್ತರ: |
|---|---|---|---|
| i. | ಗುಲಾಬಿ | ಅ. ಸಾವು | i) --------- |
| ii. | ಅನ್ನದ ಅಗುಳು | ಆ. ಬಿರುಗಾಳಿ | |
| iii. | ಮರಳುಗಾಡು | ಇ. ಜೀವ | |
| iv. | ಉರುಳುವುದು | ಈ. ಅರಳುವುದು | |

**( ಪದ್ಯ: ನನ್ನ ಕವನ . ಗುಡಿಸಲಿನಲ್ಲಿ ಅರಳುವ ಗುಲಾಬಿ ................ ಸಾವು ನನ್ನ ಕವನ )**

**2. ಕೆಳಗಿನ ವಿಧಾನಗಳನ್ನು ಪೂರ್ಣ ಮಾಡಿರಿ.** (2)

1. ............. ಕಣ್ಣೀರಿನ ಹನಿ ನನ್ನ ಪುಟ್ಟ ಕವನ.

i. ಕತ್ತಲೆಯಲ್ಲಿ ಕಾಣುವ ii. ಅರಮನೆಯಲ್ಲಿ ಉರುಳುತಲಿರುವ

ii. ಹೆಣ್ಣು ತುಳುಕಿಸಿದ iv. ಗುಡಿಸಲಿನಲ್ಲಿ ಅರಳುವ

2. ಕಾಡಿನ ನಡುವೆ ಕಂಗೆಟ್ಟವರಿಗೆ ಕಂಡ .............

i. ಸಾವು ಕವನ iii. ದಾರಿ ಕವನ

ii. ನಕ್ಷತ್ರ ನನ್ನ ಕವನ iv. ಜೀವ ನನ್ನ ಕವನ

3. ಉರುಳುತಲಿರುವ ಈ ಶಬ್ದದಿಂದ ನಾಲ್ಕು ಅರ್ಥಪೂರ್ಣವಾದ ಶಬ್ದಗಳನ್ನು ಬರೆಯಿರಿ. (2)

4. ಮೇಲಿನ ಕವಿತೆಯನ್ನು ಆಧಾರವಾಗಿಟ್ಟುಕೊಂಡು, ಇಂದಿನ ಸಮಾಜದಲ್ಲಿ ಕಂಡು ಬರುವ ಬಡತನದ ಬವಣೆಗಳನ್ನು( ನೋವುಗಳನ್ನು) ವಿವರಿಸಿರಿ. (2)

**ಪ್ರ. 19. ಕೆಳಗಿನ ಪದ್ಯಭಾಗವನ್ನು ಓದಿಕೊಂಡು ಕೊಟ್ಟ ಸೂಚನೆಗೆ ಅನುಸಾರವಾಗಿ ಕೃತಿ ಮಾಡಿರಿ.**

**1. ಕೆಳಗಿನ ವಿಧಾನಗಳನ್ನು ಪೂರ್ಣ ಮಾಡಿರಿ.** (2)

i) ಕವಿ.............ಮರೆಯಬೇಕೆಂದು ಹೇಳಿರುವರು.

ii) ಕವಿ ತಪ್ಪು..........ಇಹುದು ಎಂದು ಹೇಳಿರುವರು.

**(ಕವನ-ಇನ್ನು ಮುಂದೆ: ಈಗೇನು ಮುಗಿದಿಲ್ಲ...........ಎಲ್ಲ ಮುಗಿಯಿತು ಎಂಬುದಿನ್ನು ಸಾಕು.)**

**2. ಅಂತ್ಯಪ್ರಾಸ ಹೊಂದಿದ ಎರಡು ಜೋಡಿ ಪದಗಳನ್ನು ಬರೆಯಿರಿ .** (2)

i. 
ii. 

**3. ಕೆಳಗಿನ ಪದಗಳ ವಿರುದ್ಧಾರ್ಥಕ ಪದಗಳನ್ನು ಬರೆಯಿರಿ.** (2)

i. ಕರಿ × ii. ಬೆಳಕು ×

**4.** ಪ್ರಸ್ತುತ ಪದ್ಯದಲ್ಲಿ ಕವಿ ವಾಚಕರಿಗೆ ಹೇಳಿದ ಧೈರ್ಯದ ಮಾತುಗಳನ್ನು ಬರೆಯಿರಿ. (2)

**ಪ್ರ. 20. ಕೆಳಗಿನ ಗದ್ಯಭಾಗವನ್ನು ಓದಿ ಅದರ ಅಡಿಯಲ್ಲಿ ನೀಡಿದ ಚಟುವಟಿಕೆಗಳನ್ನು ಮಾಡಿರಿ.**

**1. ಕೆಳಗಿನ ಹೇಳಿಕೆಗಳನ್ನು ಪೂರ್ಣ ಮಾಡಿರಿ.** (2)

i) ಪ್ರಪಂಚಕ್ಕೆ ನಾವು ರವಾನಿಸುವ ಸಂದೇಶ 

ii) ಸ್ವಾತಂತ್ರ್ಯದ ಅವಕಾಶಗಳು ಇವರಿಗೂ ದೊರೆಯಬೇಕು. 

**(ಸ್ವಾತಂತ್ರ್ಯದ ಪ್ರಥಮ ಭಾಷಣ ಪುಟ ಸಂಖ್ಯೆ–88,** ಭವಿಷ್ಯ ನಮಗಾಗಿ ………………… ಬದ್ಧವಾಗಿಸಿಕೊಳ್ಳೋಣ)

**2. ನೆಹರು ಅವರು ನೀಡಿದ ಸಂದೇಶಗಳು.** (2)

**ಪ್ರ. 21. ಕೆಳಗಿನ ಗದ್ಯಖಂಡವನ್ನು ಓದಿ ಕೊಟ್ಟ ಸೂಚನೆಗೆ ಅನುಸಾರವಾಗಿ ಕೃತಿ ಮಾಡಿರಿ.**

**1. ಕೆಳಗಿನ ಹೇಳಿಕೆಗಳು ಸರಿಯೋ ತಪ್ಪೋ ಹೇಳಿರಿ.** (2)

i. ಬಾಲ್ಯದಲ್ಲಿ ಈರಮ್ಮ ತಂದೆ–ತಾಯಿಯರ, ತಾತ – ಅಜ್ಜಿಯರ ಜೊತೆ ಅಲೆಮಾರಿಯಾಗಿ ಊರೂರು ಸುತ್ತುತ್ತಿದ್ದಳು.

ii. ಚಿಕ್ಕವಳಾದ ಈರಮ್ಮ ತನ್ನ ಅಕ್ಕ – ತಂಗಿಯರೊಂದಿಗೆ ದನ ಕಾಯುತ್ತಿದ್ದಳು.

iii. ಈರಮ್ಮ ಕೆಲವೊಮ್ಮೆ ತಂದೆಯ ಜೊತೆ ಬುರ್ರ ಕಥಾ ಮೇಳದಲ್ಲಿ ಭಾಗಿಯಾಗುತ್ತಿದ್ದಳು.

iv. ಚಿಕ್ಕವಳಾದ ಈರಮ್ಮ ಕಥೆ ಮುಗಿಸುವ ಮುನ್ನ ಇಲ್ಲವೆ ಮುಗಿಯುವವರೆಗೂ ಊದಿನ ಕಡ್ಡಿಗಳನ್ನು ಹಚ್ಚಿಕೊಂಡು, ಹಾಗೇ ತಂದೆ – ತಾಯಿಯವರು ಹಾಡುವ ಕಥೆಗಳನ್ನು ತದೇಕಚಿತ್ತದಿಂದ ಆಲಿಸುತ್ತಿದ್ದಳು.

**(ಹೀಗೆ ಈರಮ್ಮನ ಬಾಲ್ಯಕಥೆ ……………..ಆಸಕ್ತಿ ಬೆಳೆಸಿಕೊಂಡಳು.ಪುಟ: 94, 95)**

**2. ಕೆಳಗಿನ ಹೇಳಿಕೆಗಳನ್ನು ಸರಿಯಾದ ಕ್ರಮದಲ್ಲಿ ಬರೆಯಿರಿ.** (2)

i. ಗಂಗೆ – ಗೌರಿ ಹಾಡುತ್ತ ಭಿಕ್ಷೆ ಬೇಡುವ ತಾಯಿಯ ಜೊತೆಗೂ ಊರೂರು, ಮನೆ ಮನೆ ತಿರುಗುತ್ತಿದ್ದಳು.

ii. ಹೀಗೆ ಈರಮ್ಮನ ಬಾಲ್ಯ ಕಥೆ ಕೇಳುವುದರಿಂದ ಪ್ರಾರಂಭವಾಗುತ್ತದೆ.

iii. ಹೀಗಾಗಿ ಈರಮ್ಮನಿಗೆ ಕಥೆ ಕಲಿಯುವ ಹವ್ಯಾಸ ಬೆಳೆಯತೊಡಗಿತು.

iv. ಅಲ್ಲದೆ ಬಾಲ್ಯದಲ್ಲಿ ಈರಮ್ಮ ದನಕಾಯುತ್ತಿದ್ದಳು.

**ಪ್ರ. 22. ಕೆಳಗಿನವುಗಳನ್ನು ಸೂಚನೆಗೆ ಅನುಸಾರವಾಗಿ ಬರೆಯಿರಿ.**

i) ವಾಕ್ಯದ ಪ್ರಕಾರ ಗುರುತಿಸಿರಿ. (1)

ಕಾಯಕವೆ ಕೈಲಾಸ ಎಂದು ಬಸವಣ್ಣನವರು ಹೇಳಿದರೆ, ಸತ್ಯದ ಮಾರ್ಗದಿಂದ ನಡೆಯಬೇಕೆಂದು ಗಾಂಧೀಜಿ ಹೇಳಿದರು. [ ]

ii) ಗಿಳಿಗಳು ಹಣ್ಣನ್ನು ತಿಂದವು. – ಪ್ರಯೋಗ ಬದಲಿಸಿರಿ. (1)

[ ]

iii) ಹುಡುಗಿಯರು, ಜನರ – ಈ ಪದಗಳ ವಿಭಕ್ತಿ ಪ್ರತ್ಯಯ ಬರೆಯಿರಿ. (1)

iv) ಕೆಳಗಿನ ಪದಗಳಿಗೆ ತತ್ಸಮ – ತದ್ಭವಗಳನ್ನು ಬರೆಯಿರಿ. (1)

ನೇಹ – [ ] ಚಲ– [ ]

v) ಸಮಾಸ ಗುರುತಿಸಿ ಹೆಸರಿಸಿರಿ. (1)

1. ಹಿರಿದಾದ+ಜೇನು= ……………ಇದು …….ಸಮಾಸ
2. ………+……..=ಮುಂದೆಲೆ. ಇದು………ಸಮಾಸ

vi) ಕೆಳಗಿನ ಬೇಕಾದ ಒಂದು ಪಡೆನುಡಿಯ ಅರ್ಥ ಹೇಳಿ ವಾಕ್ಯದಲ್ಲಿ ಪ್ರಯೋಗಿಸಿರಿ. (1)

ಪಾಠ ಕಲಿಸು – ಅರ್ಥ: ____________________

ವಾಕ್ಯ: ______________________________

vii) ಅಲಂಕಾರ ಗುರುತಿಸಿ ಹೆಸರಿಸಿರಿ. (2)

ಪೆನ್ನಲ್ಲ ಇದು ಖಡ್ಗ **ಅಥವಾ**

ಅರ್ಥಾಂತರನ್ಯಾಸ ಅಲಂಕಾರದ ಒಂದು ಉದಾಹರಣೆ ಕೊಟ್ಟು ಲಕ್ಷಣ ಬರೆಯಿರಿ.

ಉದಾ: …………………………… ಲಕ್ಷಣ………………………

viii) ಕೆಳಗೆ ಕೊಟ್ಟ ಪದ್ಯದ ಸಾಲುಗಳಿಗೆ ಪ್ರಸ್ತಾರ ಹಾಕಿ ಛಂದಸ್ಸಿನ ಹೆಸರು ಬರೆಯಿರಿ. (2)

ಬಿಸುಡದಿರು ಬಿಸುಡದಿರು ಬೇಡ ಬೇಡ ಕಟಕಟ

ಛಂದಸ್ಸಿನ ಹೆಸರು: ……….. .

**ಅಥವಾ**

ಕಂದಪದ್ಯದ ಉದಾಹರಣೆ ಕೊಟ್ಟು ಛಂದಸ್ಸು ಹಾಕಿ ಲಕ್ಷಣ ಬರೆಯಿರಿ

ಉದಾ: ................          ಲಕ್ಷಣ: ...............

## ಬರವಣಿಗೆಯ ಕೌಶಲ್ಯಗಳು

**ಪ್ರ. 23.** ಕೆಳಗಿನ ಜಾಲಾಕೃತಿಯನ್ನು ವೀಕ್ಷಿಸಿ, ಅಂಶಗಳ ಸಹಾಯದಿಂದ ಯಾವುದೇ ಒಂದು ಪತ್ರ ಬರೆಯಿರಿ.




***ಅನೌಪಚಾರಿಕ ಪತ್ರ :*** ನಿಮ್ಮ ಕಿರಿಯ ಸಹೋದರನಿಗೆ ಜೀವನದಲ್ಲಿ ಸ್ವಚ್ಛತೆ ಮತ್ತು ಶಿಸ್ತಿನ ಮಹತ್ವ ತಿಳಿಸುವ ಒಂದು ಪತ್ರ ಬರೆಯಿರಿ. ಅದಕ್ಕಾಗಿ ಮೇಲಿನ ಜಾಲಾಕೃತಿಯಲ್ಲಿ ಬರೆದ ಅಂಶಗಳನ್ನು ಉಪಯೋಗಿಸಿರಿ. ಸ್ವಚ್ಛತಾ ಅಭಿಯಾನದಲ್ಲಿ ಭಾಗವಹಿಸುವಂತೆ ಜಾಗೃತಿ ಮೂಡಿಸುವ ಸಂಗತಿಗಳು ಅದರಲ್ಲಿರಲಿ.

**ಅಥವಾ**

***ಮನವಿ ಪತ್ರ:*** ನಿಮ್ಮ ವಾರ್ಡಿನಲ್ಲಿ ತುಂಬಿ ಹರಿಯುತ್ತಿರುವ ಚರಂಡಿಗಳ ಸರಿಯಾದ ವ್ಯವಸ್ಥಾಪನೆ, ಬೇಕಾದಲ್ಲಿ ಬಿದ್ದ ಕಸದ ನಿರ್ಮೂಲನೆ ಮಾಡುವಂತೆ ಗ್ರಾಮ ಪಂಚಾಯತಿಯ ಅಧಿಕಾರಿಗೆ ಒಂದು ವಿನಂತಿ ಪತ್ರ ಬರೆಯಿರಿ. ಮೇಲಿನ ಜಾಲಾಕೃತಿಯಲ್ಲಿ ಬರೆದ ಅಂಶಗಳು ಅದರಲ್ಲಿರಲಿ.

**ಪ್ರ. 24. ವರದಿ ಲೇಖನ:**

ಶ್ರೀ .ಕಾ.ವಿ.ಶಿ.ಪ್ರಾ.ಮಂಡಳ ಜೇವೂರ. ಸಂಚಲಿತ

ಶ್ರೀ ಕಾಶೀ ವಿಶ್ವೇಶ್ವರ ಮಾಧ್ಯಮಿಕ ಮತ್ತು ಉಚ್ಚ ಮಾಧ್ಯಮಿಕ ಶಾಲೆ ಜೇವೂರ. ತಾ: ಅಕ್ಕಲಕೋಟ

ಹತ್ತನೆಯ ವಿದ್ಯಾರ್ಥಿಗಳ ಬೀಳ್ಕೊಡುವ ಮತ್ತು ಬಹುಮಾನ ವಿತರಣಾ ಸಮಾರಂಭ

***ವಾರ: ಮಂಗಳವಾರ***          ***ದಿನಾಂಕ: 09.02.2016***

ಅಧ್ಯಕ್ಷತೆ: ಶ್ರೀ.ಮ.ರಾ.ಪಾಟೀಲ (ಮಾಜಿ ಶಾಸಕರು ಹಾಗೂ ಸಂಸ್ಥೆಯ ಅಧ್ಯಕ್ಷರು)

ಪ್ರಮುಖ ಅತಿಥಿಗಳು: ಶ್ರೀ ಪಾಂಡುರಂಗ ಮಹಾರಾಜರು ( ಪ್ರಸಿದ್ಧ ಪ್ರವಚನಕಾರರು ಜೇವೂರು )

ಪ್ರಮುಖ ಉಪಸ್ಥಿತಿ: 1) ಶ್ರೀ ಮಾನನೀಯ ಸ್ವಾಮಿ ಸಾಹೇಬರು

(ಗಟ ಶಿಕ್ಷಣಾಧಿಕಾರಿಗಳು ಪಂ. ಸ. ಅಕ್ಕಲಕೋಟ)

2) ಶ್ರೀ ಮಲ್ಲಿಕಾರ್ಜುನ ಪಾಟೀಲ

( ಉಪಸಭಾಪತಿ ಪಂ. ಸ. ಅಕ್ಕಲಕೋಟ)        ಸೂತ್ರ ಸಂಚಾಲನೆ: ದೇಶಪಾಂಡೆ ಸರ್

ಮುಖ್ಯಾಧ್ಯಾಪಕರು: ಶ್ರೀ ಸ್ವಾಮಿ ಎಸ್.ಎಸ್.

ಸರ್ವರಿಗೂ ಆದರದ ಸುಸ್ವಾಗತ

ಸ್ಥಳ:ಶ್ರೀ ಕಾಶೀ ವಿಶ್ವೇಶ್ವರ ಶಾಲೆಯ ಸಭಾಂಗಣ  ಶಾರದಾಂಬಿಕೆ

ಮೇಲಿನ ಕಾರ್ಯಕ್ರಮ ಪತ್ರಿಕೆಯನ್ನು ಓದಿ ವರ್ತಮಾನ ಪತ್ರಿಕೆಗಾಗಿ ಕಾರ್ಯಕ್ರಮದ ವರದಿ ಲೇಖನ ಸಿದ್ಧಪಡಿಸಿರಿ. (5)

**ಅಥವಾ**

ಮಾನವನು ಜೀವನದಲ್ಲಿ ಉತ್ತಮವಾದ ಚಾರಿತ್ರ್ಯವನ್ನು ಹೊಂದುವದು ಅವಶ್ಯಕವಾಗಿದೆ.

**ಸಂಸ್ಕಾರವರ್ಗ**

**ಅವಧಿ: ಎಪ್ರಿಲ್ 18 ಮತ್ತು 19, 2016**

1. ಯೋಗ್ಯ ಸಂಬೋಧನೆ    2. ಶಿಕ್ಷಕರ ಮಾರ್ಗದರ್ಶನ

3. ಪ್ರಾರ್ಥನಾ ಗೀತೆಗಳು    4. ನೀತಿ ಕಥೆಗಳು

5. ಸ್ವಂತದ ಅನುಭವ

ನಿಮ್ಮ ಶಾಲೆಯಲ್ಲಿ ಸಂತ ಸೇವಾ ಸಂಘದವರು ನಡೆಸಿದ ಸಂಸ್ಕಾರವರ್ಗದ ಕುರಿತು ಮೇಲಿನ ಅಂಶಗಳನ್ನು ಉಪಯೋಗಿಸಿ ನಿಮ್ಮ ಶಾಲೆಯ ವಾರ್ಷಿಕ ಪತ್ರಿಕೆಗಾಗಿ  ಒಂದು ವರದಿ  ಲೇಖನ ತಯಾರಿಸಿರಿ. (5)

**ಪ್ರ. 25. ಕೆಳಗೆ ಕೊಟ್ಟ ಅಂಶಗಳ ಆಧಾರದ ಮೇಲಿಂದ 100 ರಿಂದ 120 ಶಬ್ದಗಳಿಗೆ ಮೀರದಂತೆ ಒಂದು ನಿಬಂಧ ಬರೆಯಿರಿ.**

1. ಪ್ರಸ್ತಾವನೆ    2. ಧರ್ಮ, ಜಾತಿ, ಉಡುಗೆ ತೊಡುಗೆಗಳಲ್ಲಿ ವಿವಿಧತೆ    3. ಭೌಗೋಲಿಕ ವಿವಿಧತೆ

4. ಅಹಾರ ಪದ್ಧತಿ    5. ವಿವಿಧ ಭಾಷೆ, ಸಾಹಿತ್ಯದಲ್ಲಿ ಏಕಾತ್ಮತೆಯ ಭಾವನೆ

6. ಎಲ್ಲ ಧರ್ಮಗಳಲ್ಲಿ ಸಮಾನತೆ    7. ನಾವೆಲ್ಲರೂ ಭಾರತೀಯರು ಎಂಬ ನಂಬಿಕೆ    8. ಮುಕ್ತಾಯ

ಮೇಲಿನ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ವಿವಿಧತೆಯಲ್ಲಿ ಏಕತೆ ಎಂಬ ವಿಷಯದ ಕುರಿತು ನಿಬಂಧ ಬರೆಯಿರಿ.

**ಅಥವಾ**

ನನ್ನ ನೆಚ್ಚಿನ ರಾಷ್ಟ್ರನಾಯಕ ಎಂಬ ವಿಷಯವನ್ನು ಕುರಿತು ಕೆಳಗೆ ಕೊಟ್ಟ ಅಂಶಗಳನ್ನು ಆಧಾರವಾಗಿಟ್ಟುಕೊಂಡು ನಿಮ್ಮ ಸ್ವಂತ ವಿಚಾರಗಳನ್ನು ಸೇರಿಸಿ ನಿಬಂಧ ಬರೆಯಿರಿ.

4. ಪ್ರಸ್ತಾವನೆ    2. ಯೋಗ್ಯ ನಾಯಕನ ಸಾಮರ್ಥ್ಯ    3. ಒಳ್ಳೆಯ ಆಚಾರ ವಿಚಾರಗಳು

4.ಸಮಾಜ ಸುಧಾರಣೆಯ ಕಾರ್ಯ    5. ಆದರ್ಶ ಗುಣಗಳು    6.ಮುಕ್ತಾಯ

**ಪ್ರ. 26. ಕೆಳಗೆ ಕೊಟ್ಟ ಅಂಶಗಳ ಆಧಾರದ ಮೇಲಿಂದ ನಿಮ್ಮ ಸ್ವಂತ ವಿಚಾರಗಳನ್ನು ಸೇರಿಸಿ ಒಂದು ಭಾಷಣ ತಯಾರಿಸಿರಿ.**

**ಭಯೋತ್ಪಾದನೆ ತಡೆಗಟ್ಟುವ ಉಪಾಯಗಳು**

1. ಭಯೋತ್ಪಾದನೆಯ ಅರ್ಥ
2. ಮಕ್ಕಳಲ್ಲಿ ಉತ್ತಮ ಸಂಸ್ಕಾರಗಳನ್ನು ಬೆಳೆಸುವುದು
3. ಮಹಾನ್ ವ್ಯಕ್ತಿಗಳ ಜೀವನದ ಆದರ್ಶಗಳನ್ನು ತಿಳಿಸುವುದು.
4. ದೇಶ –ವಿದೇಶಗಳಲ್ಲಿ ಶಾಂತಿ ಸಂಬಂಧ ಇರಿಸುವುದು.
5. ಎಲ್ಲ ಧರ್ಮಗಳಲ್ಲಿಯ ಉತ್ತಮ ಮೌಲ್ಯಗಳನ್ನು ಕಲಿಸುವುದು.
6. ಇಡೀ ಮಾನವ ಕುಲ ಒಂದೇ ಕುಟುಂಬವೆಂದು ಮನವರಿಕೆ ಮಾಡಿ ಕೊಡುವುದು.

**ಪ್ರ. 27. ಕೆಳಗಿನ ಪರಿಚ್ಛೇದದಿಂದ ಒಂದು ಕರಪತ್ರ ತಯಾರಿಸಿರಿ.**

ಈಗಿನ ಜೀವನದಲ್ಲಿ ನಮ್ಮೆಲ್ಲರಿಗೆ ವ್ಯಾಯಾಮದ ಮಹತ್ವ ಗೊತ್ತಾಗಿದೆ. ಅದರಂತೆಯೇ ಆಹಾರದ ಮಹತ್ವವೂ ಗೊತ್ತಾಗಿದೆ. ಬೆಳಿಗ್ಗೆ ಎದ್ದು ಚಹ, ಕಾಫಿ, ಕುಡಿಯುವುದಕ್ಕಿಂತ ಹಣ್ಣಿನ, ಕಾಯಿಪಲ್ಯಗಳ ರಸ ಕುಡಿದರೆ ಉತ್ತಮ.
ನಾವು ಹತ್ತು ವರ್ಷಗಳಿಂದ ಹಣ್ಣಿನ, ಕಾಯಿಪಲ್ಯಗಳ ರಸ(ಜ್ಯೂಸ್) ಉತ್ಪಾದನೆ ಮಾಡಿ ಮಾರುತ್ತಿದ್ದೇವೆ. ಆರೋಗ್ಯಕ್ಕೆ ಯಾವುದೇ ಹಾನಿಯಾಗದಂತೆ ಪೂರ್ಣ ಜಾಗೃತಿಯಿಂದ ರಸಗಳ ಉತ್ಪಾದನೆ ಮಾಡುವೆವು. ಎಲ್ಲ ಹಣ್ಣುಗಳು, ಟೊಮೆಟೊ, ಗಜ್ಜರಿ, ಹಾಗಲಕಾಯಿ, ಹಸಿರು ಕುಂಬಳಕಾಯಿ, ತುಳಸಿ, ಪಾಲಕ(ಪನಕನ)ಪಲ್ಯ, ಎಳೆಯ ಗೋದಿ ಹುಲ್ಲಿನ ಮುಂತಾದ ಬಹಳಷ್ಟು ಪ್ರಕಾರದ ರಸ(ಜ್ಯೂಸ್)ಗಳನ್ನು ನಾವು ತಯಾರಿಸುವೆವು. ಈ ಎಲ್ಲ ರಸಗಳನ್ನು ಕುಡಿಯುವುದರಿಂದ ನಾವು ಎಷ್ಟೋ ರೋಗಗಳನ್ನು ದೂರವಿಡಬಹುದು.
ದಿನಾಲೂ ಬೆಳಿಗ್ಗೆ 6 – 8ರ ವರೆಗೆ ನಾವು ಕೆಲವು ಉದ್ಯಾನಗಳ ಹೊರಗೆ ಆರೋಗ್ಯಪ್ರೇಮಿಗಳಿಗಾಗಿ ಮೇಲಿನ ರಸಗಳ ಮಾರಾಟ ಮಾಡುತ್ತೇವೆ. ಮನೆಯಲ್ಲಿ ಇವುಗಳ ತಯಾರಿಕೆ ಮಾಡುವುದು ಸಹ ಸುಲಭವಾಗಿದೆ.

**ಪ್ರ. 28. ಕೆಳಗಿನ ಗದ್ಯಭಾಗವನ್ನು ಓದಿಕೊಂಡು 1/3 ರಷ್ಟು ಸಂಕ್ಷಿಪ್ತ ಮಾಡಿ ಬರೆಯಿರಿ.**

ಸುಶೀಲಾ ಶಾಲೆಯೊಂದರಲ್ಲಿ ಪರಿಚಾರಕಿ (ಸೇವಕಿ) ಯಾಗಿದ್ದರು. ಅವರು ಶಿಸ್ತುಪ್ರಿಯರಾಗಿದ್ದರು. ಅವರ ಮೇಲೆ ಕೆಲಸದ ಹೊರೆ ಹೆಚ್ಚು, ಹಣದಾಸೆಗಾಗಿ ಎಂದಿಗೂ ಕಾರ್ಯ ನಿರ್ವಹಿಸಿದವರಲ್ಲ, ಜೀವನ ತೂಗಿಸುವುದಕ್ಕಾಗಿ ಹಲವಾರು ಜನರ ಮನೆಯಲ್ಲಿ ಕೆಲಸ ಮಾಡುತ್ತಿದ್ದರು. ತಮ್ಮ ಮನೆಯವರಿಂದಲೇ ವಂಚನೆಗೊಳಗಾಗಿ ದೂರವಿದ್ದುದರಿಂದ, ಅಯ್ಯೋ ಎನ್ನುವ ಸಜ್ಜನರು ಕೂಡ ಆಕೆಗೆ ಯಾರೂ ಇರಲಿಲ್ಲ, ಶಾಲೆಯಲ್ಲಿಯೇ ವಾಸ ಮಾಡಲು ಅವಕಾಶ ನೀಡಿದ್ದರಿಂದ ಆಕೆ ಶಾಲೆಯಲ್ಲಿಯೇ ವಾಸಿಸುತ್ತಿದ್ದರು. ಒಟ್ಟಿನಲ್ಲಿ ಅವರದು ಕಷ್ಟದ ಬದುಕಾಗಿತ್ತು. ಗುರುಗಳೊಬ್ಬರ ಸತ್ಸಂಗದಿಂದ ಆಕೆಯಲ್ಲಿದ್ದ ಧರ್ಮಶ್ರದ್ಧೆಯು ಜಾಗೃತವಾಗಿತ್ತು. ಹೂಗಳಿಂದ ಅಲಂಕೃತವಾಗಿರುತ್ತಿದ್ದ ಶಿವನ ಫೋಟೋ, ದೀಪದ ಬೆಳಕು, ಧೂಪದ ಸುವಾಸನೆ, ಶಾಲೆಯ ಮೆಟ್ಟಿಲ ಕೆಳಗಿನ ಕತ್ತಲ ಸಂಧಿಯನ್ನು ದೇವಾಲಯವಾಗಿ ಪರಿವರ್ತಿಸಿತ್ತು. ವಯೋವೃದ್ಧೆಯಾದ ಆಕೆ ಬಿಸಿಲು ಚಳಿ ಎನ್ನದೆ ಪ್ರತಿದಿನ ಬೇಗನೇ ಎದ್ದು ಪೂಜೆ,ಧ್ಯಾನಗಳನ್ನು ಮುಗಿಸಿ, ಮನೆ ಕೆಲಸಕ್ಕೆ ಹೊರಡುತ್ತಿದ್ದುದನ್ನು ಶಾಲೆಯ ವಾಚಮನ್‌ಗಳು ಗಮನಿಸಿದ್ದರು. ಆಕೆಯ ಬಾಯಲ್ಲಿ ಸದಾ ಶಿವನ ನಾಮ ಇರುತ್ತಿತ್ತು.
ಶಾಲೆಯ ಕೆಲಸವನ್ನು ಮತ್ತು ಮಕ್ಕಳ ಶುಶ್ರೂಷೆಯನ್ನು ನಗುನಗುತ್ತ, ನಿಷ್ಠೆಯಿಂದ ಮಾಡುತ್ತಿದ್ದಳು. ಬೇರೆಯವರ ಸೇವೆ ಸಹಾಯಗಳಿಗೆ ಸದಾ ಸಿದ್ಧಳಿರುತ್ತಿದ್ದಳು.ಯಾರಿಂದಲೂ ಇನಾಮು ಕೂಡ ಸ್ವೀಕರಿಸದೆ ತನ್ನದಲ್ಲದ್ದನ್ನು , ನನಗೆ ಸಲ್ಲದ್ದನ್ನು

ತೆಗೆದುಕೊಂಡರೆ ನನ್ನ ಶಿವ ಮೆಚ್ಚುತ್ತಾನೆಯೇ? ಎನ್ನುತ್ತಿದ್ದ ಪ್ರಾಮಾಣಿಕ ಜೀವ ಅವರದು. ಶಾಲೆಯ ಮಕ್ಕಳು ಅಥವಾ ಇತರ ಪರಿಚಾರಕರು ಊಟ ತರದೆ ಇದ್ದಾಗ ತನ್ನಲ್ಲಿದ್ದ ಪುಡಿಗಾಸಿನಲ್ಲಿ ಬಾಳೆಹಣ್ಣು ಕೊಡಿಸುತ್ತಿದ್ದರು. ತನ್ನ ಅತ್ಯಲ್ಪ ಆದಾಯದಲ್ಲಿ ದೇವರಿಗೆ, ಗುರುಗಳಿಗೆ, ಬಡವರಿಗೆ ಎಂದು ಆಕೆ ಭಾಗವನ್ನು ತೆಗೆದಿಡುತ್ತಿದ್ದರು.ಅವರು ಕೇಳುತ್ತಿದ್ದ ಪ್ರವಚನದ ಮೌಲ್ಯವನ್ನು ಬೇರೆಯವರಿಗೂ ಕೂಡ ತಿಳಿಸುತ್ತಿದ್ದರು. ಎಲ್ಲರಿಗೂ ಆಕೆಯನ್ನು ಕಂಡರೆ ಗೌರವ. ಅವರ ಅಂತ್ಯವೂ ಅವರ ಜೀವನದಷ್ಟೇ ಘನತೆಯಿಂದ ಕೂಡಿತ್ತು. ಶಾಲೆಯಲ್ಲಿ ಕೆಲಸ ಮಾಡುತ್ತಲೇ ದೇವರನ್ನು ಸ್ಮರಿಸುತ್ತ ಅವರು ಪ್ರಾಣ ಬಿಟ್ಟರು. ಕೆಳಸ್ತರದ ನೌಕರಿಯಲ್ಲಿದ್ದರೂ ಶಾಲೆಯ ಎಲ್ಲ ಮಕ್ಕಳು ಮತ್ತು ಶಿಕ್ಷಕರು ಅವಳನ್ನು ನೆನೆದು, ಕೈ ಮುಗಿದು ಕಣ್ಣೀರಿಟ್ಟರು.

**ಪ್ರ. 29. ಕೆಳಗೆ ಕೊಟ್ಟ ಕಥೆಯನ್ನು ಓದಿ, ಅದರ ಮುಂದಿನ ಭಾಗವನ್ನು ಪೂರ್ಣ ಮಾಡಿರಿ. ಅದಕ್ಕೆ ಒಂದು ಶೀರ್ಷಿಕೆಯನ್ನು ಕೊಡಿರಿ.**

ಒಂದು ಪುಟ್ಟ ಅರಮನೆಯ ಉದ್ಯಾನವನ್ನು ಒಬ್ಬ ತೋಟದ ಮಾಲಿಯು ನೋಡಿಕೊಳ್ಳುತ್ತಿದ್ದನು. ಅವನು ಹೂತೋಟವನ್ನು ಬಹಳ ಅಕ್ಕರೆಯಿಂದ ಸಂರಕ್ಷಣೆ ಮಾಡುತ್ತಿದ್ದನು. ತನ್ನ ಮಕ್ಕಳಿಗಿಂತಲೂ ಮಿಗಿಲಾಗಿ ಕಾಣುತ್ತಿದ್ದನು. ಉದ್ಯಾನವನದ ಗಿಡಗಳಿಗೆ ನೀರು, ಗೊಬ್ಬರ ಹಾಕುತ್ತಿದ್ದ. ದಿನವಿಡೀ ಗಿಡಗಳ ಆರೈಕೆಯಲ್ಲಿಯೇ ಸಮಯವನ್ನು ಕಳೆಯುತ್ತಿದ್ದನು. ಆ ಉದ್ಯಾನವನದ ಪಕ್ಕದ ಮರದಲ್ಲಿ ಕುಳಿತು ಕೋತಿಗಳು ತೋಟದ ಮಾಲಿಯು ಮಾಡುತ್ತಿದ್ದ ಕೆಲಸವನ್ನು ನೋಡುತ್ತಿದ್ದವು. ತೋಟದ ಮಾಲಿಯ ಕೆಲಸ, ಕಾರ್ಯಗಳನ್ನು ಮೆಚ್ಚುತ್ತಿದ್ದವು. ಹೀಗಿರುವಾಗ ಒಂದು ದಿನ ರಾಜ್ಯದ ರಾಜನು ಊರಿನ ಜನರಿಗೆಲ್ಲ ಭೋಜನಕೂಟ ಏರ್ಪಡಿಸಲಾಗಿದೆ ಎಲ್ಲರೂ ಬರಬೇಕು ಎಂದು ಡಂಗುರ ಹೊಡೆಸಿದನು. ಮಾಲಿಗೆ ಭೋಜನಕೂಟದ ನೆನಪಾಗಿ ಬಾಯಲ್ಲಿ ನೀರು ಬಂತು. ಈ ತೋಟವನ್ನು ಬಿಟ್ಟು ಹೇಗೆ ಹೋಗಲಿ ಎಂದು ಅನ್ನತೊಡಗಿದನು.

ಇವನ ಮನಸ್ಸಿನ ಸ್ಥಿತಿಯನ್ನು ಕಂಡ ಮಂಗಗಳು ಅವನ ಹತ್ತಿರ ಬಂದವು. ಮಾಲಿಗೆ ಭೋಜನಕೂಟಕ್ಕೆ ಹೋಗು ನಾವು ತೋಟವನ್ನು ನೋಡಿಕೊಳ್ಳುವೆವು ಎಂದು ಹೇಳಿದವು. . . . . . . . .